



ಧ್ರುವತಾರೆಗಳು

ಕವಿ ಕೃತಿ ಪರಿಚಯ





ಜೆ.ಎನ್. ಜಗನ್ನಾಥ್





ಧ್ರುವತಾರೆಗಳು

ಕವಿ ಕೃತಿ ಪರಿಚಯ

ಶುಭ ಹಾರೈಕೆಗಳು.
ಜೆ. ಎನ್. ಜಗನ್ನಾಥ್.

ಧ್ರುವತಾರೆಗಳು

ಕವಿ ಕೃತಿ ಪರಿಚಯ

ಜೆ.ಎನ್. ಜಗನ್ನಾಥ್

ಪ್ರಕಾಶಕರು:
ಕದಂಬ ಪ್ರಕಾಶನ
ನಂ. 834, 62ನೇ ಅಡ್ಡರಸ್ತೆ, ಕುಮಾರಸ್ವಾಮಿ ಲೇಔಟ್
1ನೇ ಹಂತ, ಬೆಂಗಳೂರು–560078
ಮೊಬೈಲ್: +91 77955 06693
ಇ–ಮೇಲ್: kadambaprakashana@gmail.com

DHRUVATAAREGALU :
Kavi Kruti Parichaya
A literary book collected by **J.N. Jagannath**
published by : **Kadamba Prakashana,** No. 834, 62nd Cross
Kumaraswamy Layout 1st Stage, Bengaluru-560 078
Mob: +91 77955 06693
E-mail: kadambaprakashana@gmail.com

First Edition : 2021

Pages : 88

ಪ್ರಥಮ ಮುದ್ರಣ : 2021
ಉಪಯೋಗಿಸಿದ ಕಾಗದ : 70 ಜಿಎಸ್ಎಂ ಎನ್ಎಸ್ ಮ್ಯಾಪ್‌ಲಿಥೋ
ಅಳತೆ : ಕ್ರೌನ್ 1/8
ಪುಟಗಳು : 88

ಮುಖಪುಟ ವಿನ್ಯಾಸ & ಅಕ್ಷರ ಜೋಡಣೆ :
ವಿರಾಟ್ ಆ್ಯಡ್ಸ್, ಬೆಂಗಳೂರು
ಮೊ: 98 44 97 1233

ಮುದ್ರಣ :
ಶ್ರೀ ಯಂತ್ರೋದ್ಧಾರಕ

ಅರ್ಪಣೆ

ವಾಣಿಜ್ಯ ವಿಭಾಗದಲ್ಲಿ ಪದವಿ ಪಡೆದ ನನಗೆ,
ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಮೂಡಿಸಿದ
ಎಂ.ಇ.ಎಸ್. ಕಾಲೇಜಿನ ಪ್ರಾಧ್ಯಾಪಕರುಗಳಾದ,
ಶ್ರೀಯುತ ಎಚ್.ವಿ. ಶ್ರೀನಿವಾಸ ಶರ್ಮ,
ಶ್ರೀಯುತ ರಾಮರಾವ್ ಕುಲಕರ್ಣಿ ಹಾಗೂ
ಶ್ರೀಮತಿ ಸಿ.ಎಸ್. ವಿಜಯಲಕ್ಷ್ಮಿ ಮತ್ತು
ಈ ಕಿರು ಹೊತ್ತಗೆ ಹೊರಬರಲು ನಿರಂತರ ಪ್ರೋತ್ಸಾಹಿಸಿದ
'**ನಗು ನಗುತಾ ನಲಿ ಬಾಳು ಬಳಗ**'ದ ಎಲ್ಲ ಸದಸ್ಯರುಗಳಿಗೆ,
ಈ ಕನ್ನಡ ಕೃತಿ ಕುಸುಮವನ್ನು
ಕೃತಜ್ಞತಾಭಾವದಿಂದ ಸಮರ್ಪಿಸುತ್ತೇನೆ.

ಮುನ್ನುಡಿ

ಸಾಹಿತಿಯೊಬ್ಬರನ್ನು ಓದುಗರು ಸನ್ಮಾನಿಸುವುದು ಹೇಗೆ? ಅವರ ಪುಸ್ತಕಗಳನ್ನು ಕೊಂಡು ಓದುವುದರಿಂದ ಎಂದರೆ ಅದು ಖಂಡಿತವಾಗಿಯೂ ಸತ್ಯ! ಅದಕ್ಕಿಂತ ಹೆಚ್ಚಿನದು ಎಂದರೆ, ಅವರ ಪುಸ್ತಕಗಳನ್ನು ಕೊಂಡು ಓದಿದ ನಂತರ ಅವರೊಡನೆ ತಮ್ಮ ಅನಿಸಿಕೆಗಳನ್ನು ಮುಕ್ತ ಮನಸ್ಸಿನಿಂದ ಹಂಚಿಕೊಳ್ಳುವುದು. ಇದಕ್ಕಿಂತಲೂ ಉತ್ತಮವೆಂದರೆ ಓದುಗರು ಸಾಹಿತಿಗಳ ಕುರಿತು ವಿಮರ್ಶೆ ಮಾಡುವುದು. ವೇದಿಕೆಗಳಲ್ಲಿ ಹಾಗೂ ಜಾಲತಾಣಗಳಲ್ಲಿ ಅವರ ಸಾಹಿತ್ಯದ ಕುರಿತಾಗಿ ಮಾತನಾಡುವುದು. ಇವೆಲ್ಲಕ್ಕಿಂತಲೂ ಉತ್ತಮೋತ್ತಮವಾದದ್ದೊಂದಿದೆ. ಅದು ಸಾಹಿತಿಗಳ ಕೃತಿಗಳ ಬಗ್ಗೆ, ಅವರ ವಿಚಾರಧಾರೆಗಳ ಬಗ್ಗೆ ಬರೆಯುತ್ತ ಅವರ ಒಟ್ಟು ಜೀವನದ ಆದರ್ಶಗಳನ್ನು ದಾಖಲಿಸುವುದು. ಹೀಗೆ ಬರೆದದ್ದನ್ನು ನಂತರ ಪುಸ್ತಕ ರೂಪದಲ್ಲಿ ಇನ್ನಿತರ ಓದುಗರಿಗೆ ದೊರೆಯುವಂತೆ ಮಾಡುವುದು. ಪುಸ್ತಕವೊಂದು ಲೋಕಾರ್ಪಣೆಯಾದಾಗ, ಅದು ಬಹು ಕಾಲ ಉಳಿವ ಜ್ಞಾನವಸ್ತುವಾಗುತ್ತದೆ. ದೇಶಕಾಲಗಳನ್ನು ಮೀರಿ, ಅದನ್ನು ಓದುವವರಿಗೆಲ್ಲ ಅವರವರ ಜ್ಞಾನದಾಹವನ್ನು ತಣಿಸಬಲ್ಲ ಜ್ಞಾನಗಂಗೆಯೂ ಆಗುತ್ತದೆ.

ಆತ್ಮೀಯ ಗೆಳೆಯರಾದ ಶ್ರೀ ಜೆ.ಎನ್. ಜಗನ್ನಾಥ್ ಅವರು, ತಾವು ಮನಸಾರೆ ಮೆಚ್ಚಿಕೊಂಡ ಐವರು ಸಾಹಿತಿಗಳನ್ನು ಈ ಗ್ರಂಥದಲ್ಲಿ ಪರಿಚಯಿಸುತ್ತಿದ್ದಾರೆ. ತನ್ಮೂಲಕ ಅವರನ್ನು ತಮ್ಮದೇ ಆದ ಒಂದು ವಿಶೇಷ ರೀತಿಯಲ್ಲಿ ನೆನೆಯುತ್ತಿದ್ದಾರೆ; ಸತ್ಕರಿಸುತ್ತಿದ್ದಾರೆ; ಸನ್ಮಾನಿಸುತ್ತಿದ್ದಾರೆ. ಅವರ ಈ ಸಂಭ್ರಮದಲ್ಲಿ ನನಗೂ ಭಾಗಿಯಾಗುವುದಕ್ಕೆ ಈ ರೀತಿಯಲ್ಲಿ ಅವಕಾಶ ಮಾಡಿಕೊಟ್ಟಿರುವ ಆತ್ಮೀಯರಿಗೆ ಮೊದಲಲ್ಲೇ ನನ್ನ ಅನಂತ ಧನ್ಯವಾದಗಳು ಸಲ್ಲುತ್ತವೆ.

ಈ ಗ್ರಂಥದಲ್ಲಿ ಉಲ್ಲೇಖವಿರುವ ಸಾರಸ್ವತ ಲೋಕದ ಐವರೂ ಮಹನೀಯರನ್ನು ನಾನು ಓದಿಕೊಂಡಿದ್ದರೂ, ಅವರೆಲ್ಲ ಜಗನ್ನಾಥ್ ಅವರ ಚಿತ್ರಪಟದಲ್ಲಿ ಹೇಗೆ ಮೂಡಿ ಬಂದಿದ್ದಾರೆ ಎಂಬ ಕುತೂಹಲದಿಂದಲೇ ಈ ಗ್ರಂಥವನ್ನು ಮತ್ತೊಮ್ಮೆ ಅವಲೋಕಿಸಿದೆ ಎಂದರೆ ತಪ್ಪಾಗಲಾರದು. ಎಲ್ಲರಿಗೂ ತಿಳಿದಿರುವ ವಿಷಯಗಳ ಹೊರತಾಗಿಯೂ ಕೆಲವೊಂದು ವಿಶೇಷ ಸಂಗತಿಗಳನ್ನೂ ಕೂಡ ಜಗನ್ನಾಥ್ ಅವರು ಇಲ್ಲಿ ಉಲ್ಲೇಖಿಸಿರುವುದು, ಅವರ ವಸ್ತುನಿಷ್ಠ ಸಂಶೋಧನಾ ಪ್ರವೃತ್ತಿಗೆ ಒಂದು ಪುಟ್ಟ ಉದಾಹರಣೆಯಷ್ಟೆ.

ರಾಷ್ಟ್ರಕವಿ ಗೋವಿಂದ ಪೈ ಅವರ ಬಹುಭಾಷಾ ಸಾಹಿತ್ಯ ಕೃಷಿಯನ್ನು ಪರಿಚಯಿಸುತ್ತಲೇ, ಅವರು ಡಾ. ಕಾಲೇಕ್ಕರ್ ಅವರಿಗೆ ನೀಡಿದ ಊರುಗೋಲು ಅದು ಹೇಗೆ ಮಹಾತ್ಮ ಗಾಂಧೀಜಿಯವರಿಗೆ ತಲುಪಿತು ಎಂಬ ಸಂಗತಿಯನ್ನು ಕೂಡ ಅಷ್ಟೇ ಮನೋಜ್ಞವಾಗಿ ತಿಳಿಸುತ್ತಾರೆ. ತಮ್ಮ ಸಾಕುತಾಯಿಯಾದ ಸುಬ್ಬಮ್ಮನವರಿಗೆ ತಮ್ಮಿಂದಾದ ತಪ್ಪನ್ನು ಕ್ಷಮಿಸುವಂತೆ ಯಾಚಿಸುತ್ತ ಶ್ರೀಯುತ ಗೋವಿಂದ ಪೈ ಅವರು ಹೇಗೆ ತಮ್ಮ ಎರಡು ಕೃತಿಗಳನ್ನು ಅವರಿಗೆ ಅರ್ಪಿಸಿದರು ಎಂಬ ವಿಚಾರದಡಿಯಲ್ಲೇ,

ಜಗನ್ನಾಥ್ ಅವರು ಹಿರಿಯ ಸಾಹಿತಿಗಳ ಮೃದುಮನದ ಪದರಗಳನ್ನು ಬಿಡಿಸಿಟ್ಟಿರುವುದು ನನಗೆ ಖುಷಿ ಕೊಟ್ಟ ಸಂಗತಿ.

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಪರಿಚಯದ ಪ್ರಸ್ತಾವವೇ ಪ್ರಶಸ್ತವಾಗಿದೆ. ಅವರ 'ಮುಂಬೈ ಜಾತಕ' ಅವರ ಎಲ್ಲ ಓದುಗ ಅಭಿಮಾನಿಗಳಿಗೆ ಅವರನ್ನು ಇನ್ನೂ ಸ್ಪಷ್ಟವಾಗಿ ಅರಿಯಲು ಜಗನ್ನಾಥ್ ಅವರು ನೀಡಿರುವ 'ದ್ಯೋತಕ'ವೇ ಆಗಿದೆ. ಜೊತೆಯಲ್ಲಿಯೇ ಇರುವ ಪ್ರೀತಿ ಸ್ನೇಹಗಳಲ್ಲಿ ದೈವವನ್ನು ಕಾಣಬಯಸುವ ಜಿ.ಎಸ್.ಎಸ್. ಅವರ ಕಾವ್ಯದ ಅಂತರಂಗವನ್ನು ಜಗನ್ನಾಥ್ ಅವರು ಇಲ್ಲಿ ಸಮಗ್ರವಾಗಿ ಚಿತ್ರಿಸಿದ್ದಾರೆ.

'ಯಾವ ಮೋಹನ ಮುರಲಿ ಕರೆಯಿತು, ದೂರ ತೀರಕೆ ನಿನ್ನನು' ಈ ಸಾಲುಗಳನ್ನು ಗುನುಗದ ಕನ್ನಡಿಗ ಅಥವಾ ಕನ್ನಡತಿ ಉಂಟೆ? ಶ್ರೀಯುತರಾದ ಗೋಪಾಲಕೃಷ್ಣ ಅಡಿಗರ ಕಾವ್ಯಗಳ ಜೊತೆಯಲ್ಲಿಯೇ, ಸಾಕಷ್ಟು ಓದುಗರಿಗೆ ತಿಳಿಯದ ಅವರ ಕಾದಂಬರಿಗಳನ್ನೂ ಇಲ್ಲಿ ಜಗನ್ನಾಥ್ ಅವರು ಪರಿಚಯಿಸಿರುವುದು ಗಮನೀಯ. ಬಿ.ಎಂ.ಶ್ರೀ. ಅವರು ತೋರಿದ ನವೋದಯದ ದಾರಿಯಲ್ಲಿ ನಡೆದು ಆ ದಾರಿಯನ್ನು ತಮ್ಮ ನಂತರದ ಅದೆಷ್ಟೋ ಕವಿಗಳಿಗೆ ಸರ್ವೋದಯದ ಹೆದ್ದಾರಿಯನ್ನಾಗಿಸಿದ ಶ್ರೇಯ ಶ್ರೀಯುತರಾದ ಅಡಿಗರಿಗೇ ಸಲ್ಲಬೇಕು.

ಇಲ್ಲಿನ ನಾಲ್ಕನೆಯ ಸಾಹಿತಿಗಳನ್ನು ಓದುಗವಾಗ, ನೆನಪಿಗೆ ಬಂದ ನನ್ನದೇ ಒಂದು ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ನಾನು ಶಾಸ್ತ್ರೀಯವಾಗಿ ಕನ್ನಡ ಭಾಷೆಯನ್ನು ವ್ಯವಸ್ಥಿತ ರೀತಿಯಲ್ಲಿ ಕಾಲೇಜುಗಳಲ್ಲಿ ಅಭ್ಯಾಸ ಮಾಡಿದವನಲ್ಲ. 2005ರ ಹೊತ್ತಿಗೆ ದಿಢೀರನೆ ಬರೆಯಲಿಕ್ಕೆ ಶುರುಮಾಡಿ, ಮೊದಲಿಗೆ ಸುಮಾರು ಎಂಟು ನೂರು

ಮುಕ್ತಕಗಳನ್ನು ರಚಿಸಿದೆ. ಅವುಗಳನ್ನು ಶತಾವಧಾನಿ ಡಾ. ಆರ್. ಗಣೇಶ್ ಅವರಿಗೆ ತೋರಿಸಿ ಅವರ ಅಭಿಪ್ರಾಯ ಕೇಳಿದಾಗ – "ಸತ್ಯೇಶ್, ನಿಮ್ಮ ಚಿಂತನೆಗಳು ಸೊಗಸು. ಆದರೆ, ಇಲ್ಲಿ ಯಾವುದರಲ್ಲಿಯೂ ಛಂದಸ್ಸೇ ಇಲ್ಲವಲ್ಲ", ಎಂದರು. "ಛಂದಸ್ಸು? ಹಾಗೆಂದರೇನು??" – ಇದನ್ನು ಅರಸುತ್ತ ಪುಸ್ತಕ ಮಳಿಗೆಯಿಂದ ಓದಲು ನಾನು ಕೊಂಡು ತಂದ ಮೊದಲ ಪುಸ್ತಕವೇ "ಕನ್ನಡ ಛಂದೋಮೀಮಾಂಸೆ." ಇದನ್ನು ಓದಿ, ಅರಗಿಸಿಕೊಂಡು ಆ ಎಂಟು ನೂರು ಮುಕ್ತಕಗಳನ್ನು ಮತ್ತೊಮ್ಮೆ ಛಂದಸ್ಸಿನಲ್ಲಿ ರಚಿಸಿ, ನಂತರದಲ್ಲಿ ಶತಾವಧಾನಿ ಗಣೇಶ್ ಅವರ ಅನೇಕ ಅವಧಾನಗಳಲ್ಲಿ ಪೃಚ್ಛಕವಾಗಿ ಭಾಗವಹಿಸುತ್ತ, ಬಗೆಬಗೆಯ ಛಂದಸ್ಸುಗಳಲ್ಲಿ ಕವನಗಳನ್ನು ಹೆಣೆದಿದ್ದು, ನನ್ನ ಸಾರ್ಥಕದ ಕ್ಷಣಗಳಲ್ಲಿ ಒಂದು. ಅದಕ್ಕೆ ಮೂಲದಲ್ಲಿ ಕಾರಣವಾದ 'ಕನ್ನಡ ಛಂದೋಮೀಮಾಂಸೆ' ಕೃತಿಯ ಕರ್ತೃವೇ ಇಲ್ಲಿ ಉಲ್ಲೇಖಗೊಂಡಿರುವ ವಿದ್ವಾನ್ ಶ್ರೀ ವೆಂಕಟಾಚಲ ಶಾಸ್ತ್ರೀಗಳು – ನಾಡಿನ ಹಿರಿಯ ಭಾಷಾತಜ್ಞರಲ್ಲಿ ಮೇಲ್ಪಂಕ್ತಿಯಲ್ಲಿ ರಾರಾಜಿಸುವ ಮಹನೀಯರು.

ಈಗ ಬರುವವರೇ ತನಾಶಿ ಅವರು. ನನ್ನ ಆತ್ಮೀಯ ವಿದ್ವನ್ಮಿತ್ರರೂ ಹೌದು. ಅವರು ಚರದೂರವಾಣಿಯಲ್ಲಿ ಟಂಕಿಸುತ್ತ ಸಾಗುತ್ತಾರೆ – ಕಾವ್ಯಗಳ ಸುರಿಮಳೆಯಾಗುತ್ತದೆ! ಅದೇ ಚರದೂರವಾಣಿಯಲ್ಲಿ ಸನ್ಮಾನ್ಯ ಡಿ.ವಿ.ಜಿ. ಅವರ ಕಗ್ಗಗಳಿಗೆ ವ್ಯಾಖ್ಯಾನ ಬರೆಯುತ್ತ ಸಾಗುತ್ತಾರೆ – ಪ್ರಬಂಧಗಳ ಸರಮಾಲೆಯಾಗುತ್ತದೆ! ಬರೆದ ನಂತರ ಏನೊಂದನ್ನೂ ತಿದ್ದದೆ, ತೀಡದೆ ಓತಪ್ರೋತವಾಗಿ ನಿರಂತರವಾಗಿ ಸಾಹಿತ್ಯಕೃಷಿಯಲ್ಲಿ ತಮ್ಮನ್ನೇ ತಾವು ಪರಿಪೂರ್ಣವಾಗಿ ತೊಡಗಿಸಿಕೊಂಡಿರುವ ತನಾಶಿ ಅವರು, ನಮ್ಮ ಕಾಲಘಟ್ಟದ ಒಬ್ಬ 'ಮೇಧಾವಿ ಆಶುಕವಿ'ಯೇ ಆಗಿದ್ದಾರೆ. ಅವರು ಇನ್ನೂ ಹೆಚ್ಚುಹೆಚ್ಚು

ಬರೆಯಲಿ ಹಾಗೂ ಜನ ಅವರನ್ನು ಇನ್ನೂ ಹೆಚ್ಚು ಹೆಚ್ಚು ಓದಲಿ ಎಂಬುದೇ ನನ್ನ ಮನದಾಳದ ಇಂಗಿತ.

ಹೀಗೆಯೇ ಐವರನ್ನೂ ಓದಿಕೊಂಡು ಪುಸ್ತಕದ ಕಡೆಯ ಪುಟಕ್ಕೆ ಬಂದಿದ್ದೆ. ಈ ಎಲ್ಲ ದಿಗ್ಗಜರನ್ನೂ ಜಗನ್ನಾಥ್ ಅವರು ಸೂಕ್ಷ್ಮವಾಗಿ ಓದಿಕೊಂಡು, ಆಳವಾಗಿ ಅಭ್ಯಸಿಸಿ, ಸರಿದಾರಿಯಲ್ಲಿ ಅರ್ಥೈಸಿಕೊಂಡು, ಅತ್ಯಂತ ಪ್ರೀತಿಯಿಂದ ಅವರೆಲ್ಲರ ಸಮಗ್ರ ಕಥನವನ್ನು ಸಂಕ್ಷಿಪ್ತವಾಗಿ ಹಾಗೂ ಅಷ್ಟೇ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ. ಈ ಎಲ್ಲ ಮಹನೀಯರ ಸಾರಸ್ವತ ಸಾಧನೆಯ ಪುಟಗಳನ್ನು ತಿರುವಿ ಹಾಕುತ್ತಲೇ ಅವರ ವ್ಯಕ್ತಿತ್ವವನ್ನು ಚಂದದಲ್ಲಿ ರೇಖಿಸಿದ್ದಾರೆ. ಇಲ್ಲಿರುವ ಐದೂ ಸಾಹಿತಿಗಳ ಎಲ್ಲ ಕೃತಿಗಳನ್ನು ಓದಿ, ಅದಕ್ಕೆ ಬೇಕಾದ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿ, ಅವುಗಳ ವಿಚಾರವಾಗಿ ಬಲ್ಲವರೊಂದಿಗೆ ಚರ್ಚಿಸಿ ಒಂದು ಅಚ್ಚುಕಟ್ಟಾದ ನೆಲೆಗಟ್ಟಿನಲ್ಲಿ ಓದುಗರಿಗೆ ಅದನ್ನು ನೀಡುವಲ್ಲಿ ಜಗನ್ನಾಥ್ ಅವರು ಗೆದ್ದಿದ್ದಾರೆ. ಜಗನ್ನಾಥ್ ಅವರ ಈ ಪ್ರಥಮ ಗ್ರಂಥವನ್ನು ಓದಿ ನನಗಂತೂ ಅತೀವ ಸಂತಸವಾಗಿದೆ ಎಂದು ಪ್ರಾಮಾಣಿಕವಾಗಿ ಹೇಳಬಲ್ಲೆ.

ಒಂದು ಸಲಹೆ, ಈ ಪುಸ್ತಕದ ಓದುಗ ಮಿತ್ರರಿಗೆ! ಇದನ್ನು ನಿಶ್ಶಬ್ದವಾಗಿ ಮನಸ್ಸಿನಲ್ಲೇ ಓದಿಕೊಳ್ಳಬೇಡಿ. ನೀವು ವೇದಿಕೆಯಲ್ಲಿ ನಿಂತಿದ್ದೀರಿ, ನಿಮ್ಮ ಮುಂದೊಂದು ಮೈಕ್ ಇದೆ, ಸಭೆಯಲ್ಲಿ ಸಹಸ್ರಾರು ಜನ ನಿಮ್ಮನ್ನು ಆಲಿಸಲು ಕಾತರರಾಗಿದ್ದಾರೆ ಎಂದು ಭಾವಿಸಿಕೊಳ್ಳಿ. ಗಟ್ಟಿಯಾಗಿ ಓದಿ... ಖಂಡಿತ ಖುಷಿಪಡುತ್ತೀರಿ. ಜಗನ್ನಾಥರ ಬರವಣಿಗೆಯ ಶೈಲಿಯೇ ಅದಾಗಿದೆ.

ಆತ್ಮೀಯ ಗೆಳೆಯರಾದ ಜಗನ್ನಾಥ್ ಅವರಿಂದ 'Financial Derivatives' ಕುರಿತಾಗಿ ಪುಸ್ತಕವೊಂದು

ಸದ್ಯದಲ್ಲಿಯೇ ಬರಲಿದೆ. ಆ ವಿಷಯಗಳಲ್ಲಿ ಒಲವಿರುವ ನನಗೆ ಅದನ್ನೋದುವ ಕುತೂಹಲ. ಜೊತೆಗೆ ಗೆಳೆಯ ಬೆಳೆವ ಪರಿಯನ್ನು ಕಂಡು ಆನಂದಿಸುವ ಕಾತರ...

ಎಲ್ಲರಿಗೂ ಶುಭವಾಗಲಿ.

ಸತ್ಯೇಶ್ ಬೆಳ್ಳೂರ್

17–10–2021

ಬೆಂಗಳೂರು

ಹೃದಯದ ಮಾತು

ಕನ್ನಡ ಸಾಹಿತ್ಯಾಸಕ್ತನಾದ ನನಗೆ ಶ್ರೀ ಸುನೀಲ್ ಹಳೆಯೂರು, ಮೈಸೂರಿನ ಶ್ರೀಮತಿ ಮೀನಾಕ್ಷಿ ಸುರೇಶ್ ಹಾಗೂ ನಗುನಗುತ ನಲಿ ಬಾಳು ಬಳಗದ ಸದಸ್ಯರು ಕವಿ ಕಾವ್ಯ ಕೃತಿ ಪರಿಚಯಿಸಲು ಪ್ರೋತ್ಸಾಹಿಸಿದರು. ಪ್ರಾರಂಭದಲ್ಲಿ ಆಡಿಯೋ ಮೂಲಕ ಪ್ರಾರಂಭವಾದ ಈ ಕೈಂಕರ್ಯ ನಂತರ ವಿಡಿಯೋ ಆಗಿ ಪರಿವರ್ತನೆಯಾದ ಪ್ರಯತ್ನವಿದು.

ಒಮ್ಮೆ ಮದ್ದೂರಿನಲ್ಲಿ ನಡೆದ ಸಂಗೀತ ಸಂಜೆಯಲ್ಲಿ ಶ್ರೀ ಮೈಸೂರು ಅನಂತಸ್ವಾಮಿಯವರನ್ನು ಪರಿಚಯಿಸುವ ಸುಯೋಗ ನನಗೆ ದೊರಕಿತ್ತು. ಅಂದು ಪರಿಚಯ ಭಾಷಣದಲ್ಲಿ ನಾನು ಶ್ರೀಯುತ ಮೈಸೂರು ಅನಂತಸ್ವಾಮಿ, ಶ್ರೀಯುತ ಪಿ. ಕಾಳಿಂಗ ರಾವ್, ಶ್ರೀ ಸಿ. ಅಶ್ವಥ್ ಮತ್ತು ಅನೇಕ ಸುಗಮ ಸಂಗೀತಗಾರರಿಂದ ಕನ್ನಡದ ಉತ್ಕೃಷ್ಟ ಕವನಗಳು ಜನಮಾನಸವನ್ನು ಮುಟ್ಟಿವೆ, ಇಲ್ಲದಿದ್ದರೆ ಹೆಸರಾಂತ ಕವಿಗಳ ಅನೇಕ ಶ್ರೇಷ್ಠ ಕವನಗಳು ಕೇವಲ ಪುಸ್ತಕದಲ್ಲಿ ಹುದುಗಿಹೋಗುತ್ತಿದ್ದವು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದೆ. ಆಗ ಮೈಸೂರು ಅನಂತಸ್ವಾಮಿಯವರು 'ಜಗನ್ನಾಥ್ ತಮ್ಮ ಅಭಿಪ್ರಾಯ ಅಕ್ಷರಶಃ ಸತ್ಯ. ಅಂತಹ ಕವಿಗಳ ಬಗ್ಗೆ

ಪರಿಚಯಿಸುವ ಪ್ರಯತ್ನವನ್ನು ನೀವು ಮಾಡಬೇಕು' ಎಂದು ಆಶಯ ವ್ಯಕ್ತಪಡಿಸಿದ್ದರು.

ಈಗ ಮೂವತ್ತು ವರುಷದ ನಂತರ ಆ ಕೈಂಕರ್ಯ ಸಾಕಾರವಾಗುವ ಎಲ್ಲ ಲಕ್ಷಣಗಳು ನನಗೆ ಗೋಚರಿಸುತ್ತಿವೆ.

ಐವರು ಅಸಾಮಾನ್ಯ, ಅದ್ಭುತ ಲೇಖಕರ ಪರಿಚಯದ ಹೂರಣವೇ ಈ ಹೊತ್ತಗೆ.

ಕನ್ನಡ ಸಾಹಿತ್ಯ ದಿಗ್ಗಜರ ಬಗ್ಗೆ ಅನೇಕ ಲೇಖನಗಳು, ಪ್ರಕಟಣೆಗಳು ವಿಚಾರ ಸಂಗ್ರಹಣೆಗೆ ಅನುವುಮಾಡಿಕೊಟ್ಟಿವೆ. ಪ್ರತಿಯೊಬ್ಬ ಲೇಖಕರ ಕೃತಿಗಳನ್ನು ಆಸಕ್ತಿಯಿಂದ ಓದಿ, ಅರ್ಥಮಾಡಿಕೊಂಡು, ವಿಮರ್ಶಿಸಿ ನನ್ನ ಅಲ್ಪ ಜ್ಞಾನಕ್ಕೆ ಎಟುಕಿರುವ ಮಟ್ಟದಲ್ಲಿ ಮಾತ್ರ ಪರಿಚಯಿಸಲು ಪ್ರಯತ್ನಿಸಿದ್ದೇನೆ.

ಈ ಹೊತ್ತಗೆ ಹೊರಬರಲು ಪ್ರಮುಖವಾಗಿ ನಗುನಗುತಾ ನಲಿ ಬಾಳು ವಾಟ್ಸ್ಯಾಪ್ ಬಳಗ ಹಿರಿದಾದ ಪಾತ್ರವನ್ನು ವಹಿಸಿದೆ. ಬಳಗದ ಎಲ್ಲ ಸದಸ್ಯರೂ ಮತ್ತು ಗಣನಾಯಕ ಸುನೀಲ್ ಹಳೆಯೂರುರವರು ನನಗೆ ಒತ್ತಾಸೆಯಾಗಿ ನಿಂತಿದ್ದಾರೆ. ಕವಿ–ಕಾವ್ಯ ಪರಿಚಯ ಮಾಲಿಕೆಯನ್ನು ಅಕ್ಷರ ರೂಪ ಮತ್ತು ಆಡಿಯೋ ರೂಪದಲ್ಲಿ ಹೊರತಂದಾಗ ವೀಡಿಯೋ ರೂಪಕ್ಕೂ ಪರಿವರ್ತಿಸಿ ಯೂಟ್ಯೂಬ್ ಸಾಮಾಜಿಕ ಜಾಲತಾಣಕ್ಕೂ ಸೇರಿಸುವಲ್ಲಿ ಬಳಗ ಪ್ರೋತ್ಸಾಹ ನೀಡಿದೆ.

ಈ ಪ್ರಕಟಣೆಗೆ ನನ್ನೊಡನೆ ಸಹಕರಿಸಿರುವ ಮಾಗಡಿಯ ಶ್ರೀ ರಾಮಚಂದ್ರಯ್ಯ, ಬಸವಾಪಟ್ಟಣದ ಶ್ರೀ ಬ.ನಾ. ಸುಬ್ರಹ್ಮಣ್ಯ, ಕೋಲಾರದ ಶ್ರೀ ದೇವರಾಜು, ಬೆಂಗಳೂರಿನ ಶ್ರೀ ಸೋಗಾನೆ ರಘು ಭಟ್, ಶ್ರೀ ಸಿ.ಎನ್. ಮಹೇಶ್, ಶ್ರೀ ಎಂ.ಎನ್. ವಿಶ್ವೇಶ್ವರ, ಶ್ರೀ ಫಣೀಂದ್ರ ರಿತ್ತಿ, ಶ್ರೀ ಜೆ.ಎನ್. ರವಿ ಮತ್ತು ಶ್ರೀಮತಿ ಸ್ಮಿತಾ ಜಕಾತೆಯವರುಗಳಿಗೆ ಅನಂತ ಕೃತಜ್ಞತೆಗಳು.


ಈ ಕೈಂಕರ್ಯದಲ್ಲಿ ಅನವರತ ನನಗೆ ಪ್ರೋತ್ಸಾಹ ನೀ ಉತ್ಸಾಹವನ್ನು ತುಂಬುತ್ತಿರುವವರು ನನ್ನ ಮಡದಿ ವಿದ ಹಾಗೂ ನನ್ನ ಪ್ರೀತಿಯ ಸ್ಮಿತಾ, ಮಧು, ಸಿಂಧು ಮತ್ತ ಅಕ್ಷಯ್.

ಈ ಕಿರು ಪ್ರಯತ್ನಕ್ಕೆ ಮುನ್ನುಡಿ ಬರೆದು ಪ್ರೋತ್ಸಾಹಿಸಿರುವ ಖ್ಯಾತ ಸಾಹಿತಿ, ಚಿಂತಕ ಶ್ರೀ ಸತ್ಯೇಶ್ ಎನ್. ಬೆಳ್ಳೂರ್‌ರವರಿಗೂ, ಕದಂಬ ಪ್ರಕಾಶನದ ಮಾಲೀಕರಾದ ಶ್ರೀ ನಾಗೇಶ್, ಅಕ್ಷರ ಜೋಡಣೆ ಮಾಡಿಕೊಟ್ಟ ವಿರಾಟ್ ಆ್ಯಡ್ಸ್‌ನ ವಿಕ್ರಮ್ ಅಡಿಗರವರಿಗೂ ಹಾಗೂ ಅಂದವಾಗಿ ಮುದ್ರಿಸಿದ ಶ್ರೀ ಯಂತ್ರೋದ್ಧಾರಕದ ಮಾಲೀಕರಾದ ಶ್ರೀ ಅನಿಲ್ ಕುಮಾರ್ ಅವರಿಗೆ ನಾನು ಅಭಾರಿ.

ಜೆ.ಎನ್. ಜಗನ್ನಾಥ್

ಪರಿವಿಡಿ

1



ಎಂ. ಗೋವಿಂದ ಪೈ

ಎಂ. ಗೋವಿಂದ ಪೈ
ಕನ್ನಡದ ಪ್ರಥಮ ರಾಷ್ಟ್ರಕವಿ

ತನು ಕನ್ನಡ ಮನ ಕನ್ನಡ ನುಡಿ ಕನ್ನಡವೆಮ್ಮವು
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು
ಎಲ್ಲರಲಿ ದಯೆದೋರಿ
ಯಾರನುಂ ಹಗೆಯದಿರಿ
ಒಳ್ಳೆತನ ಎಸಗುತಿರಿ
ಚಿತ್ತವನೆ ಶುದ್ಧಿಸಿರಿ

ಪೈಯವರು ಕನ್ನಡ, ಕೊಂಕಣಿ, ಗುಜರಾತಿ, ತುಳು, ಮರಾಠಿ, ಮಲಯಾಳಂ, ಅರ್ಧಮಾಗಧಿ, ತೆಲುಗು, ತಮಿಳು, ಸಂಸ್ಕೃತ, ಹಿಂದಿ, ಉರ್ದು, ಬಂಗಾಳಿ, ಪ್ರಾಕೃತ, ಪಾಲಿ, ಇಂಗ್ಲಿಷ್, ಗ್ರೀಕ್, ಫ್ರೆಂಚ್, ಪರ್ಷಿಯನ್, ಜಪಾನಿ ಮತ್ತು ಇಟಾಲಿಯನ್ ಭಾಷೆಗಳನ್ನು ಬಲ್ಲ ಅಪರೂಪದ ಕನ್ನಡ ವಿದ್ವಾಂಸರಾಗಿದ್ದರು.

ಗೋವಿಂದ ಪೈಯವರ ಬಗ್ಗೆ ಶ್ರೀ ಜಿ. ವರದರಾಜರಾವ್ ರವರು ತಿಳಿಸುವ ಪ್ರಕಾರ ರಾಷ್ಟ್ರಾಭ್ಯುದಯದ ಹೊಂಗನಸನ್ನು ಕಾಣುತ್ತಿದ್ದ ಕವಿಗೆ, ಸ್ವಾತಂತ್ರ್ಯಾನಂತರದ ದುಃಖ ಪರಂಪರೆ ಯನ್ನು ಕಂಡು ಆದ ಹತಾಶೆ ಹೇಳತೀರದು.

ಇನ್ನು ಹೆರವರ ನೊಗಕೆ ಮಣಿವರಾವಲ್ಲ
ಜಗದಿ ತಲೆಯೆತ್ತಿ ಹೆಬ್ಬಾಳಲೆದ್ದಿಹೆವು

ಕಳಕೊಂಡ ಬಿಡುಗಡೆಯ ಮರಳಿ ಗೆದ್ದಿದ್ದೆವು
ನಡೆ ಮುಂದೆ, ಹಿಂದವಿನ್ನಡಿಮೆಯನ್ನೊಲ್ಲ

ಎಂದು ಎತ್ತರಿಸಿದ್ದ ಅವರ ಧ್ವನಿ, ಇದ್ದಕ್ಕಿದಂತೆಯೇ ಸ್ವಾತಂತ್ರ್ಯದಾತನನ್ನು ನೆನೆದು, **'ಏನು ತೋರಿಸಿದೆಮಗೆ ಮೇಣೇನನಿತ್ತೆ: ಕಳಕೊಂಡ ಬಿಡುಗಡೆಯ ನಮಗಿತ್ತೆತಂದೆ. ಆದರೀಗಣ ಕಥೆಯ ಬಲ್ಲೆಯಾ ಮತ್ತೆ ರಾಹುವನು ತೊಲಗಿಸಿದೆ, ಕೇತುವನು ತಂದೆ'** ಎಂದು ಇಳಿಮುಖವಾಗುವುದು.

ಗಾಂಧೀಜಿಯನ್ನು ಸ್ಮರಿಸಿ, **ಇನ್ನಿನಿಸು ನೀ ಮಹಾತ್ಮ ಬದುಕಬೇಕಿತ್ತು** ಎಂದು ಯಾತನೆ ಪಡುವರು. ಮಾತೃಭೂಮಿಯನ್ನು ಈಶ್ವರನೆಂದು ಕಲ್ಪಿಸಿಕೊಂಡು ರಚಿಸಿರುವ ಅಷ್ಟಕದಲ್ಲಿ 'ಅಧ್ವಶ್ರಾಂತಗೆ ಬೆಲ್ಲವಿತ್ತೊಡನೆ ನೀರಂ ನೀಡಬೇಡಾ' ಎಂದು ಪ್ರಶ್ನಿಸಿ, 'ಕಾಯ್ಕೆ ನೀನೆಮಗಿತ್ತ ಪೂರ್ವ ವರಮಂ ಸ್ವಾತಂತ್ರ್ಯಮಂ ಸರ್ವದಾ' ಎಂದು ಪ್ರಾರ್ಥಿಸುವರು.

ಗೋವಿಂದ ಪೈ ಅವರ ಈ ದೇಶಪ್ರೇಮ ಸ್ವದೇಶಕ್ಕೆ ಮಾತ್ರ ಸೀಮಿತವಾಗದೆ, ದೂರದ ತುರ್ಕಿಯನ್ನು ಕಬಳಿಸಲು ಇಟಲಿಯು ಮಾಡಿದ ಸನ್ನಾಹವನ್ನು ಖಂಡಿಸುವವರೆಗೂ ವ್ಯಾಪಿಸಿರುವುದು.

ಗೋವಿಂದ ಪೈಯವರನ್ನು ಕರ್ನಾಟಕ ರಾಜ್ಯಾದ್ಯಂತ ನೆನಪಿಸಿಕೊಳ್ಳುವ ಕವನ,

ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೆ
ನಮ್ಮ ತಪ್ಪನೆನಿತೊ ತಾಳ್ವೆ
ಅಕ್ಕರೆಯಿಂದೆಮ್ಮನಾಳ್ವೆ
ನೀನೆ ಕಣಾ ನಮ್ಮ ಬಾಳ್ವೆ

ನಿನ್ನ ಮರೆಯಲಮ್ಮೆವು
ತನುಕನ್ನಡ, ಮನ ಕನ್ನಡ, ಧನಕನ್ನಡವೆಮ್ಮವು.

ಶ್ರೀ ಟಿ.ಎಸ್. ಗೋಪಾಲ್‌ರವರ ಮೂಲಕ ನಾವು ಗೋವಿಂದ ಪೈಯವರ ಬಗ್ಗೆ ಹೆಚ್ಚು ತಿಳಿಯಬಹುದು. ವಿಶದವಾಗಿ, ಆಳವಾಗಿ ವಿಷಯ ಸಂಗ್ರಹಣೆ ಮಾಡಿ ಗೋಪಾಲರು ಗೋವಿಂದ ಪೈಯವರ ಬಗ್ಗೆ ಪರಿಚಯಿಸಿದ್ದಾರೆ.

ಎಂ. ಗೋವಿಂದ ಪೈ 1883 ಮಾರ್ಚ್ ತಿಂಗಳ 23ರಂದು ಮಂಜೇಶ್ವರದಲ್ಲಿ ಜನಿಸಿದರು. ಹೆಸರಿನಲ್ಲಿರುವ 'ಎಂ.' ಮಂಗಳೂರಾದರೂ ಅವರ ಹೆಚ್ಚಿನ ಬಾಳ್ವೆ ಮಂಗಳೂರು ಬಳಿಯಿರುವ ಕಾಸರಗೋಡು ತಾಲ್ಲೂಕಿನ ಮಂಜೇಶ್ವರದಲ್ಲಿ. ಮಂಜೇಶ್ವರ ಕೇರಳಕ್ಕೆ ಸೇರಿದಾಗ, ನೊಂದು 'ಚಂದ್ರಗಿರಿಯ ಹೊಳೆಯೀಚೆಯ ನಾಡು ಅದೆಂತು ಕೇರಳವಾದೀತು? ನನ್ನ ಮಟ್ಟಿಗೆ ನನ್ನ ವಿಳಾಸ ಎಂ. ಗೋವಿಂದ ಪೈ, ಮಂಜೆಶ್ವರ, ಸೌತ್ ಕೆನರಾ ಎಂದೇ! ಮಂಜೇಶ್ವರ ಎಂದಿಗೂ ದಕ್ಷಿಣ ಕನ್ನಡ ಜಿಲ್ಲೆ. ನಾನಿರುವಷ್ಟು ಕಾಲ ಹೀಗೇಯೇ ಬರೆಯುವುದು' ಎಂದು ನುಡಿದರು. ನುಡಿದಂತೆ ನಡೆದುಕೊಂಡರು.

ಗೋವಿಂದ ಪೈಯವರು ಸಿರಿವಂತ ಕುಟುಂಬದವರು. ಮಂಗಳೂರಿನ ಬಾಬಾ ಪೈ ಮನೆತನದವರು. ತಂದೆ ಸಾಹುಕಾರ್ ತಿಮ್ಮಪ್ಪ ಪೈ. ತಾಯಿ ದೇವಕಿಯಮ್ಮ ಮಂಜೇಶ್ವರದವರು. ದಂಪತಿಗಳ ಮಾತೃಭಾಷೆ ಕೊಂಕಣಿ. ಗೋವಿಂದರಿಗೆ ಮೂವರು ತಮ್ಮಂದಿರು, ಮೂವರು ತಂಗಿಯರು. ಇವರದು ಗೌಡಸಾರಸ್ವತ ವಂಶ. ತಮ್ಮ ಕುಲದ ಮೂಲವನ್ನೇ ಹುಡುಕ ಹೊರಟರು. ಸರಸ್ವತೀ ನದಿಯ ತೀರದಲ್ಲಿ ನೆಲೆಸಿದ್ದ ಸಮೂಹದವರಾದ್ದರಿಂದ ಈ ಕುಲದವರಿಗೆ ಸಾರಸ್ವತರೆಂದು ಹೆಸರು. 16ನೇ ಶತಮಾನದಲ್ಲಿ ಗೋವೆಯಲ್ಲಿ

ಪೋರ್ಚುಗೀಸರು ಪ್ರಬಲರಾದಾಗ ಇವರಿಗೆ ಕ್ರೈಸ್ತರಾಗುವ ಒತ್ತಡ ಆಳುವವರಿಂದ ಹೆಚ್ಚಾಯಿತು. ಸಾರಸ್ವತ ಬ್ರಾಹ್ಮಣರು ಸಮುದ್ರ ತೀರದಲ್ಲಿ ದಕ್ಷಿಣ ಮತ್ತು ಉತ್ತರ ಭಾಗಗಳಿಗೆ ಪಯಣ ಬೆಳೆಸಿದರು. ಆದರೆ ಪೂಜಾ ದೇವತೆಗಳು ಗೋವಾದಲ್ಲಿ ಉಳಿದುಕೊಂಡಿತು. ಇಂದಿಗೂ ಜನ್ಮದಲ್ಲಿ ಒಮ್ಮೆಯಾದರೂ ಸಾರಸ್ವತರು ಗೋವೆಯ ದೇವಾಲಯಕ್ಕೆ ಭೇಟಿಕೊಡುವುದು ರೂಢಿಯಾಗಿದೆ. ಗೋವಿಂದ ಪೈಯವರು 1926ರಲ್ಲಿ ಗೋವೆಗೆ ಭೇಟಿ ನೀಡಿದಾಗ ತಮ್ಮ ಜನರು ಕಟ್ಟಿದ ದೇವಾಲಯಗಳನ್ನು ಪೋರ್ಚುಗೀಸರು ಕೆಡವಿದ್ದ ಅವಶೇಷಗಳನ್ನು ಕಂಡರು. ಈ ಇತಿಹಾಸದ ಬಗ್ಗೆ ಬೆಳಕು ಚೆಲ್ಲಲು ಅವರು ಪೋರ್ಚುಗೀಸ್ ಭಾಷೆಯನ್ನು ಕಲಿತರು.

ಶಾಸನಗಳಲ್ಲಿ ಕಂಡು ಬರುವ ಗೋವೆಯ ಸಾರಸ್ವತರ ಹೆಸರುಗಳನ್ನು ಸಂಗ್ರಹಿಸಿ ಅವುಗಳ ಬಗೆಗೆ Flashes from the Past ಎಂಬ ಶೀರ್ಷಿಕೆಯಲ್ಲಿ ಹಲವು ಇಂಗ್ಲಿಷ್ ಲೇಖನಗಳನ್ನು ಬರೆದರು. ಇವು ಸಂಶೋಧನಾ ಕ್ಷೇತ್ರದಲ್ಲಿ ಪೈಯವರು ಬರೆದ ಮೊದಲ ಲೇಖನಗಳು. ಈ ರೀತಿ ಪೈಗಳು ಸಂಶೋಧನಾ ಪ್ರಪಂಚಕ್ಕೆ ಸೆಳೆಯಲ್ಪಟ್ಟರು. ಪೈಯವರ ಮನೆಯ ಗ್ರಂಥ ಭಂಡಾರ ಬೆಳೆಯುತ್ತ ಸಾಗಿದಂತೆ ಅವರ ಸಂಶೋಧನೆ, ಆಳವಾದ ಅಧ್ಯಯನ ಪ್ರಾರಂಭವಾಯಿತು.

ಪ್ರಾಸತ್ಯಾಗ, ವಿವಿಧ ಛಂದಸ್ಸುಗಳಲ್ಲಿ ಕವಿತೆಯ ಪ್ರಯೋಗ, ಇವರ ಸಾಧನೆ. ಪೈಯವರು ಬರೆದ ಕವಿತೆಗಳಿಗಿಂತ ಗದ್ಯ ಲೇಖನದ ಸಂಖ್ಯೆದೊಡ್ಡದು. ಎಲ್ಲೆಲ್ಲೋ ಹರಡಿ ಹೋಗಿದ್ದ ಸುಮಾರು 353 ಅಮೂಲ್ಯ ಲೇಖನಗಳನ್ನೆಲ್ಲ ಕೂಡಿಸಿ ಒಂದು ಸಂಪುಟದಲ್ಲಿ ಪ್ರಕಟಿಸಲು ಹೊರಟಾಗ ಪುಟಗಳ ವ್ಯಾಪ್ತಿ 1350. ಯಾರ ನೆರವೂ ಇಲ್ಲದೆ ತನ್ನ ಮನೆಯಲ್ಲೇ

ಕುರಿತು ಏಕಾಂಗಿಯಾಗಿ ಪೈಯವರು ನಡೆಸಿದ ಈ ವಾಙ್ಮಯ ತಪಸ್ಸು ಅಚ್ಚರಿ ಮೂಡಿಸುತ್ತದೆ. ಅವರ ಆಸಕ್ತಿ, ಕುತೂಹಲ, ಶ್ರದ್ಧೆ ಅವರ ಸಂಶೋಧನೆಯಲ್ಲಿ ಸ್ಪಷ್ಟತೆ, ನಿಖರತೆಯನ್ನು ತಂದುಕೊಟ್ಟಿದೆ.

ಗೋವಿಂದ ಪೈಯವರು ಮುಂಬೈ ನಗರದಲ್ಲಿ ನಡೆದ 34ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದುದು ಕನ್ನಡಿಗರ ಭಾಗ್ಯ. ಅವರು ಮುಂಬೈ ಬಗ್ಗೆ ಸುದೀರ್ಘ ಸಂಶೋಧನೆ ನಡೆಸಿದರು. ಅವರ ಪ್ರಕಾರ 8ನೇ ಶತಮಾನದಲ್ಲಿ ಇಲ್ಲಿಯ ಆಳ್ವಿಕೆ ಶಿಲಾಹಾರ ವಂಶದ ಅರಸರದಾಗಿತ್ತು. ಶಿಲಾಹಾರರು ರಾಷ್ಟ್ರಕೂಟದ ಸಾಮಂತರಾಗಿ, ಉತ್ತರ ಕೊಂಕಣದ ಅರಸರಾಗಿದ್ದರು. ಅವರ ಬಿರುದುಗಳಲ್ಲಿ ಮಲೆವ ಗಂಡ, ನನ್ನಿ ಸಮುದ್ರ ಎಂಬ ಶುದ್ಧ ಕನ್ನಡ ಪದಗಳಿವೆ. ಅವರ ಕಾಲದ ಶಾಸನಗಳು ಅಚ್ಚ ಕನ್ನಡದಲ್ಲಿದೆ. ಅಣ್ಣಪ್ಪ ಮೊದಲಾದ ಹೆಸರುಗಳ ಉಲ್ಲೇಖವಿದೆ. ಈ ಶಿಲಾಹಾರರ ರಾಜಧಾನಿ ಸ್ಥಾನಕ ನಗರ. ಇಂದಿನ ಠಾಣೆ ಕ್ರಿ.ಶ. 16ನೇ ಶತಮಾನದಲ್ಲಿ ಮುಂಬೈಯನ್ನು ವಶಪಡಿಸಿಕೊಂಡ ಪೋರ್ಚುಗೀಸರು ಅದನ್ನು ಬಾಂಬೈಯಾ ಎಂದರೆ ಒಳ್ಳೆಯ ಕೊಲ್ಲಿ ಪ್ರದೇಶ ಎಂಬ ಹೆಸರು ಕೊಟ್ಟರು. ಅಲ್ಲಿದ್ದ ಕೋಳೀ ಎಂಬ ಬೆಸ್ತರು, ಸಾರಸ್ವತರು ಮೂಲವಾಸಿಗಳು. ಅವರನ್ನು ಕಾನರೀಸ್ ಎಂದರೆ ಕನ್ನಡಿಗರು ಎಂದೇ ಕರೆಯುತ್ತಿದ್ದರು. ಮುಂಬೈಯನ್ನು ಮುಖ್ಯ ವ್ಯಾಪಾರ ಸ್ಥಳ ಮಾಡಿ ಎಲ್ಲ ಕಡೆಯಿಂದ ಜನರು ಬರಲು, ಕನ್ನಡಿಗರ ಸಂಖ್ಯೆ ಕ್ಷೀಣಿಸಿದಂತೆ ಕಂಡಿತು ಎಂದು ಗೋವಿಂದ ಪೈಯವರು ಅಭಿಪ್ರಾಯ ಪಡುತ್ತಾರೆ. ಈಗಲೂ ಮುಂಬೈಯಲ್ಲಿ ಕನ್ನಡಿಗರ, ಸಾರಸ್ವತರ ಮಂಗಳೂರಿನವರ ಪಾತ್ರ ಹೆಚ್ಚಿನದಾಗಿದೆ.

ಗೋವಿಂದ ಪೈಯವರು ಹೆಚ್ಚಿನ ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲಿ ಪಡೆದರು. ಬಾಸೆಲ್ ಮಿಶನ್ ಶಾಲೆ, ಕೆನರಾ ಹೈಸ್ಕೂಲು, ಇಂಟರ್ ಮೀಡಿಯಟ್ ಸರ್ಕಾರಿ ಕಾಲೇಜಿನಲ್ಲಿ, ಬಿ.ಎ. ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ. ಪೈಯವರಿಗೆ 'ಭಾಷಾ' ಪತ್ರಿಕೆಯಲ್ಲಿ ಪ್ರಥಮ ಸ್ಥಾನ ದೊರೆತು ಚಿನ್ನದ ಪದಕ ಗಳಿಸಿದರು. ಸ್ವಾತಂತ್ರ್ಯಾನಂತರ ರಾಷ್ಟ್ರಪತಿಗಳಾದ ಶ್ರೀ ರಾಧಾಕೃಷ್ಣನ್‌ರವರು ಇವರ ಸಹವಿದ್ಯಾರ್ಥಿಯಾಗಿದ್ದರು. ಈ ವೇಳೆಯಲ್ಲಿ ಅವರ ತಂದೆ ವಿಧಿವಶರಾದುದರಿಂದ ಸಂಸಾರದ ಎಲ್ಲ ಜವಾಬ್ದಾರಿ ಗೋವಿಂದ ಪೈಯವರ ಮೇಲಿತ್ತು. ಮುಂದೆ ವ್ಯಾಸಂಗ ಮುಂದುವರಿಸಲಾಗಲಿಲ್ಲ. ನಂತರ ಪೈಯವರು ಮಂಜೇಶ್ವರ ಸೇರಿ ಸಂಶೋಧನೆ ಮತ್ತು ಅಧ್ಯಯನ ಮುಂದುವರೆಸಿದರು.

ಪೈಯವರಿಗೆ ಪಂಜೆ ಮಂಗೇಶರಾಯರು ಅಧ್ಯಾಪಕರಾಗಿದ್ದರು. ಪೈಯವರು ಷೇಕ್ಸ್‌ಪಿಯರನ 'ಟ್ವೆಲ್ತ್ ನೈಟ್' ನಾಟಕದ ಕೆಲವು ದೃಶ್ಯಗಳನ್ನು ಕನ್ನಡಕ್ಕೆ ರೂಪಾಂತರಿಸಿ ಮುದ್ದಣ ಕವಿ ಎಂದು ಪ್ರಖ್ಯಾತರಾಗಿರುವ ನಂದಳಿಕೆ ಲಕ್ಷ್ಮೀನಾರಣಪ್ಪನವರ ಸಲಹೆ ಪಡೆದರು. ಕಾಲೇಜು ವ್ಯಾಸಂಗದ ಸಮಯದಲ್ಲಿ ಮಂಗಳೂರಿನ 'ಸುವಾಸಿನಿ' ಮಾಸಪತ್ರಿಕೆಯ ಸ್ಪರ್ಧೆಯಲ್ಲಿ ಐದು ರೂಪಾಯಿ ಬಹುಮಾನ ಪಡೆದರು. ಪೈಯವರು ಕಾಲೇಜು ದಿನಗಳಲ್ಲಿ ಕಂದ ಪದ್ಯಗಳನ್ನು ರಚಿಸಿದ್ದರು.

ಕನ್ನಡ ಬಲ್ಲಿದರೆಲ್ಲರ
ಮುನ್ನೀರಿನ ಬೇಳ್ವಳಗಿನ ಧ್ರುವತಾರಗೆಯೇ
ನಿನ್ನಯಕಿರಣದೆ ನೌಕಾ
ಸನ್ನುತರಲ್ಲದ ನರರಂ ಜತನದಿ ನಡೆಸೌ

ಪಿ.ಯು.ಸಿ. ತರಗತಿಯಲ್ಲಿ ಓದುವ ಹುಡುಗನೊಬ್ಬ ಯಾರದೇ ನೆರವಿಲ್ಲದೆ ಅಚ್ಚಗನ್ನಡದಲ್ಲಿ ಈ ಮಟ್ಟದ ಕವನ ರಚಿಸುವುದು ಸಾಧಾರಣವಲ್ಲ. ಅದಕ್ಕೆ ಅಗತ್ಯವಾದ ಭಾಷಾ ಪರಿಜ್ಞಾನ, ಪೂರ್ವಸಿದ್ಧತೆ, ವ್ಯಾಸಂಗ, ಅಭಿರುಚಿ, ಆಸಕ್ತಿಗಳನ್ನು ಪರಿಗಣಿಸಿದರೆ ಪೈಯವರ ಪಾಂಡಿತ್ಯದ ವಿಸ್ತಾರತೆ ಅರಿಯಬಹುದು.

ಗೋವಿಂದ ಪೈಯವರ ಕೃತಿಗಳು:

- **ನಾಟಕಗಳು:**
  ತಾಯಿ
  ಹೆಬ್ಬೆರಳು
  ನೋ ನಾಟಕಗಳು
  ಚಿತ್ರಭಾನು ಅಥವಾ 1942
- **ಗದ್ಯ:**
  ಕನ್ನಡದ ಮೊರೆ
  ಶ್ರೀಕೃಷ್ಣಚರಿತ
  ಮೂರು ಉಪನ್ಯಾಸಗಳು
  ಪಾರ್ಶ್ವನಾಥ ತೀರ್ಥಂಕರ ಚರಿತ
  ಬಾಹುಬಲಿ ಗೋಮಟೇಶ್ವರಚರಿತ್ರೆ
  ಭಗವಾನ್ ಬುದ್ಧ.
- **ಕಾವ್ಯ/ಕವಿತೆ:**
  ಗಿಳಿವಿಂಡು
  ಭಕ್ತವಾಣಿ
  ನಂದಾದೀಪ
  ಹೃದಯರಂಗ

ಇಂಗಡಲು
ಗೊಲ್ಗೊಥಾ
ವೈಶಾಖಿ

- **ಸಂಶೋಧನೆ**

ಗೋವಿಂದ ಪೈ ಸಂಶೋಧನ ಸಂಪುಟ

ಗೋವಿಂದ ಪೈಯವರ ಮನಸ್ಸು ಮಗುವಿನಂಥದು. ಮುಗ್ಧ, ನಿಷ್ಕಲ್ಮಶ. ಆದ್ದರಿಂದಲೇ ಅವರನ್ನು 'ಬೆಳ್ಳಿ ಮೀಸೆಯ ಮಗು' ಎಂದು ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಕರೆದುದುಂಟು. ತಮ್ಮಂದಿರ ಮಕ್ಕಳನ್ನು ಪ್ರೀತಿಸುವುದರ ಮೂಲಕ ತಮಗೆ ಮಕ್ಕಳಿಲ್ಲದ ಕೊರಗನ್ನು ಅವರು ಮರೆತರು. ಪೈಯವರು ಇರುವೆಡೆ ಮಕ್ಕಳ ಸಂಭ್ರಮ ಹೇಳತೀರದು.

ಗೋವಿಂದ ಪೈಯವರ ಧರ್ಮಪತ್ನಿ ಲಕ್ಷ್ಮಿ. ಅವರು ಪೈಯವರಿಗೆ ಎಲ್ಲ ಕ್ರಿಯಾಶೀಲತೆಯಲ್ಲಿ ಜೊತೆಗೆ ನಿಂತವರು. ಅವರ ಮತ್ತೊಂದು ಹೆಸರು ಶ್ರೀಮತಿ ಕೃಷ್ಣಾಬಾಯಿ. ಹಲವು ಭಾಷೆಗಳನ್ನು ಕಲಿತಿದ್ದರು. ಅಲ್ಲದೆ ಸಂಗೀತ, ನಾಟಕ, ರಂಗಗೀತೆಗಳಲ್ಲಿ ಅವರಿಗೆ ಹೇಳತೀರದ ಆಸಕ್ತಿ. ಲಕ್ಷ್ಮಿಯವರ ಪ್ರೋತ್ಸಾಹದಿಂದ ಪೈಯವರು ಮರಾಠಿ ಭಾಷೆ ಕಲಿತರು.

ಬೆಂಗಾಲಿ ಭಾಷೆಯ ನವೀನಚಂದ್ರ ಸೇನರ ಕಾವ್ಯಗಳ ಭಾಗಗಳನ್ನು ಆರಿಸಿ ಶ್ರೀಕೃಷ್ಣಚರಿತ ಅನುವಾದಿತ ಕೃತಿ ಸಂಪೂರ್ಣಗೊಳಿಸಿದರು. ಪಾಲಿಭಾಷೆ ಅಧ್ಯಯಿಸಿ ಬೌದ್ಧಧರ್ಮ ಸೂತ್ರಗಳನ್ನು ಕನ್ನಡದಲ್ಲಿ ನೀಡಿದರು. ಇವೆಲ್ಲ ಆಗಿನ ಜನಪ್ರಿಯ ಮಾಸಪತ್ರಿಕೆಯಾದ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದವು.

ಬರೋಡದ ಮಹಾರಾಜರು ನೌಸಾರಿಯಲ್ಲಿ ನೂತನವಾಗಿ ಮಾದರಿ ಶಾಲೆಯನ್ನು ಸ್ಥಾಪಿಸಿದರು. ಶಾಲೆಯ ಪ್ರಾಚಾರ್ಯರು

ಡಾ. ಕಾ.ಕಾ. ಕಾಲೇಲ್ಕರ್. ಒಂದು ತಿಂಗಳು ಈ ಶಾಲೆಯಲ್ಲಿ ಪೈಯವರು ಮಹಾರಾಜರ ಇಚ್ಛೆಯಂತೆ ಸೇವೆ ಸಲ್ಲಿಸಿದರು. ಡಾ. ಕಾ.ಕಾ. ಕಾಲೇಲ್ಕರ್ ಮಂಜೇಶ್ವರಕ್ಕೆ, ಸ್ವಾತಂತ್ರ್ಯ ಸಂಗ್ರಾಮ ವೇಳೆ ಆಗಮಿಸಿದ್ದಾಗ ಪೈಯವರ ಮನೆಯಲ್ಲಿ ಒಂದು ದಿನ ಉಳಿದುಕೊಂಡಿದ್ದರು. ಆಗ ಪೈಯವರು ಒಂದು ಊರು ಗೋಲನ್ನು ಸ್ನೇಹದ ಕುರುಹಾಗಿ ಕಾಲೇಲ್ಕರ್‌ರವರಿಗೆ ನೀಡಿದ್ದರು. ಅದನ್ನು ದಂಡೀ ಯಾತ್ರೆಯ ಸಮಯದಲ್ಲಿ ಗಾಂಧೀಜಿಯವರಿಗೆ ಕಾಲೇಲ್ಕರ್ ಅವರು ನೀಡಿದ್ದರು. ನವದೆಹಲಿಯ ಗಾಂಧೀ ವಸ್ತು ಸಂಗ್ರಹಾಲಯದಲ್ಲಿಯ ಈ ಊರುಗೋಲು ಬಗ್ಗೆ ಕಾಲೇಲ್ಕರ್ ಒಂದೆಡೆ ಟಿಪ್ಪಣಿ ಬರೆದಿದ್ದಾರೆ: 'ಈ ಅಮೂಲ್ಯವಾದ ಊರುಗೋಲನ್ನು ದೇಶದ ಜನರೆಲ್ಲರೂ ಮಹಾತ್ಮ ಗಾಂಧಿಜೀಯವರ ಹೆಸರಿನೊಡನೆ ನೆನಪಿಸಿಕೊಳ್ಳುತ್ತಾರೆ. ನನ್ನ ಮಟ್ಟಿಗೆ ಈ ಕೋಲು ಒಬ್ಬ ಆಪ್ತ ಗೆಳೆಯ ಪೈಯವರ ಸ್ನೇಹ, ವಿಶ್ವಾಸಗಳ ಸ್ಮರಣೆಯೂ ಆಗಿದೆ.'

ಪೈಯವರು ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದರಲ್ಲಿ ಮುಂದಾಗಿದ್ದರು. ತಮ್ಮ ಸಾಕುತಾಯಿ ಸುಬ್ಬಮ್ಮನವರ ಮಾತು ಕೇಳದೆ ಇದ್ದುದನ್ನು, ನೆನಪಿಸಿಕೊಂಡು, ತಮ್ಮ ಎರಡೂ ಕೃತಿಗಳನ್ನು ಅವರ ನೆನಪಿಗೆ ಸಮರ್ಪಿಸಿ ಕ್ಷಮೆ ಯಾಚಿಸಿದ್ದಾರೆ. ತಾವು ಶ್ರಮವಹಿಸಿ ಸಂಶೋಧನೆ ನಡೆಸಿ ಮಂಡಿಸಿದ ವಿಚಾರಗಳಲ್ಲಿ ಕೆಲವು ಅಭಿಪ್ರಾಯ ಭೇದ ಬಂದಾಗ ಚರ್ಚಿಸಿ, ತಮ್ಮ ಮನಸ್ಸಿಗೆ ತಪ್ಪು ಅರಿವಾದರೆ ತಮ್ಮ ಅಭಿಪ್ರಾಯ ತಪ್ಪಾಗಿದೆ ಎಂದು ಒಪ್ಪಿಕೊಳ್ಳುವ ವಿಶಾಲ ಮನೋಭಾವದವರಾಗಿದ್ದರು.

ಅನೇಕ ವೇಳೆ ತಮ್ಮ ಬರಹಗಳನ್ನು ಪುಸ್ತಕ ರೀತಿಯಲ್ಲಿ ಮುದ್ರಿಸುವುದನ್ನು ಅವರು ಒಪ್ಪುತ್ತಿರಲಿಲ್ಲ. ಕೇವಲ ಪ್ರಚಾರ ಮನ್ನಣೆಗೆ ನಾನು ಬರೆಯುವುದಿಲ್ಲ ಎಂದು ಅವರ ಅಭಿಪ್ರಾಯ.

ಅವರ ಪುಸ್ತಕಗಳನ್ನು ಪಠ್ಯಪುಸ್ತಕ ಮಾಡಬಾರದು ಎಂಬುದು ಅವರ ಷರತ್ತು. ಪೈಯವರು ಸನ್ಮಾನ, ಪ್ರಶಸ್ತಿಗಳೆಂದರೆ ಬಹಳ ದೂರ. ಪೈಯವರು ರಾಷ್ಟ್ರಕವಿ ಪ್ರಶಸ್ತಿಗೆ ಒಪ್ಪಿಕೊಂಡದ್ದೂ ಒಂದು ಅನಿವಾರ್ಯ ಸಂದರ್ಭದಲ್ಲಿ. ಅಂದಿನ ಧುರೀಣರಾದ ಕಲ್ಲೆ ನಾರಾಯಣರಿಗೆ ಪೈಯವರ ಬಗ್ಗೆ ಅಪಾರ ಗೌರವ. ಸರ್ಕಾರ ಐದು ಭಾಷೆಗಳಲ್ಲಿ ಒಬ್ಬೊಬ್ಬರನ್ನು ರಾಷ್ಟ್ರಕವಿಯಾಗಿ ಗೌರವಿಸುತ್ತಿದೆ, ನಿಮ್ಮ ಹೆಸರು ಕಳುಹಿಸಿದ್ದೇವೆ ಎಂದು ತಿಳಿಸಿ ಬಿಟ್ಟರು.

1949ರಲ್ಲಿ ಮದ್ರಾಸಿನಲ್ಲಿ ಕನ್ನಡ, ಮಲಯಾಳಂ, ಸಂಸ್ಕೃತ, ತಮಿಳು ಮತ್ತು ತೆಲುಗು ಭಾಷೆಯಲ್ಲಿ ರಾಷ್ಟ್ರಕವಿ ಪ್ರಶಸ್ತಿಯನ್ನು ಭಾವನಗರದ ಮಹಾರಾಜರಾದ ಶ್ರೀ ಕೃಷ್ಣಸಿಂಹರು ನೀಡಿದರು. ಇಂಗ್ಲಿಷ್ ಭಾಷಣವನ್ನು ಪೈಯವರು ಆಯಾ ಕವಿಗಳ ಭಾಷೆಯಲ್ಲಿ ಅನುವಾದಿಸಿ ಕಡೆಯಲ್ಲಿ ಅವರು ಪ್ರಶಸ್ತಿ ಪಡೆದರು. ಪೈಯವರು ಬಹುಭಾಷಾ ಪ್ರವೀಣರಾಗಿದ್ದು ಕಾರ್ಯಕ್ರಮಕ್ಕೆ ಗೌರವ ತಂದಿತು.

ಶ್ರೀ ಗೋಪಾಲರ ಪ್ರಕಾರ, ಇಂಗ್ಲಿಷ್‌ನಲ್ಲಿ 'ಸಾನೆಟ್' ಎಂಬ ಕಾವ್ಯಪ್ರಕಾರವಿದೆ. ಹೊಸಗನ್ನಡದಲ್ಲಿ ಇದನ್ನು 'ಸುನೀತ' ಎಂದು ಕರೆಯಲಾಗಿದೆ. ಇದು 14 ಸಾಲುಗಳ ಪದ್ಯವಾಗಿದ್ದು 'ಚತುರ್ದಶಪದಿ' ಎಂದು ಹೆಸರು. ಈ ಮಾದರಿಯಲ್ಲಿ ಕನ್ನಡದಲ್ಲಿ ಪದ್ಯ ಬರೆಯಲು ಗೋವಿಂದ ಪೈಯವರು ಪ್ರಯತ್ನಿಸಿದಾಗ ಕನ್ನಡದಲ್ಲಿ ಪ್ರಾಸ ಮುಖ್ಯವಾಗಿತ್ತು. ಪ್ರತಿ ಸಾಲಿನಲ್ಲಿ ಎರಡನೆಯ ಅಕ್ಷರ ಒಂದೇ ಆಗಿರಬೇಕೆಂದು ನಿಯಮವಿತ್ತು. 14 ಸಾಲು ಎರಡನೆಯ ಅಕ್ಷರ ಒಂದೇ ಆಗಿರುವುದು ಕಠಿಣ. ಪ್ರಾಸ ಬಿಡಲು ಗುರುಗಳಾದ ಪಂಜೆ ಮಂಗೇಶರಾಯರ ಸಲಹೆ ಕೇಳಿದರು. ಅನೇಕ ಶತಮಾನದಿಂದ

ಬಂದ ರೀತಿಯನ್ನು ಬಿಡುವುದು ಬೇಡವೆಂದು ಗುರುಗಳ ಸಲಹೆ.

ರವೀಂದ್ರನಾಥ ಠಾಕೂರರ 'ಅಯಿ ಭುವನ ಮನಮೋಹಿನಿ' ಪದ್ಯವನ್ನು, ಮಹಮ್ಮದ್ ಇಕ್ಬಾಲರ 'ಹಿಂದುಸ್ತಾನ್ ಹಮಾರ' ಗೀತೆ ಕನ್ನಡಕ್ಕೆ ಅನುವಾದಿಸಿದರು. ಪ್ರಾಸವಿಲ್ಲದೆ ಬರೆದದ್ದು ವಿಶೇಷ. ಗೋವಿಂದ ಪೈಯವರು ಪ್ರಾಸವನ್ನು ತೊರೆದು ಹೊಸ ಬಗೆಯಲ್ಲಿ ಕಾವ್ಯ ಬರೆಯುವ ಮಾರ್ಗಕ್ಕೆ ಪ್ರವರ್ತಕರಾದರು. ಪೈಯವರಿಗೆ ಖಗೋಲ, ಜ್ಯೋತಿಷ್ಯಗಳ ಜ್ಞಾನವಿತ್ತು.

ಅನೇಕ ಪೆಟ್ಟುಗಳು ಬಿದ್ದ ಮೇಲೆ ವಿಗ್ರಹವಾಗುವಂತೆ, ಪೈಗಳು ಸಾಂಸಾರಿಕ ಜೀವನದಲ್ಲಿ ಅನೇಕ ತೊಂದರೆಗಳಿಗೆ ಸಿಲುಕಿದ್ದರು. ತಂದೆ ಬೇಗ ವಿಧಿವಶರಾದರು. ಮಡದಿ ಅನಾರೋಗ್ಯದಿಂದ ನರಳುತ್ತಿದ್ದರು. ಹೆಣ್ಣು ಮಗು ಬೇಗನೆ ತೀರಿಕೊಂಡಿತು. ಈ ಜಂಜಾಟದಲ್ಲಿ ಅವರ ಸಾಹಿತ್ಯ ಕೃಷಿ, ಆಸಕ್ತಿ ನೂರು ಪಟ್ಟಿತ್ತು. ಇಪ್ಪತ್ಮೂರು ಭಾಷೆ ತಿಳಿದವರು ಬಹಳ ವಿರಳ. ಕನ್ನಡ, ಇಂಗ್ಲಿಷ್, ಹಿಂದಿ, ಕೊಂಕಣಿ, ಗುಜರಾತಿ, ಮಲಯಾಳಂ, ಮರಾಠಿ, ಅರ್ಧಮಾಗಧಿ, ಉರ್ದು, ತುಳು, ಸಂಸ್ಕೃತ, ಬಂಗಾಳಿ, ಒರಿಯಾ, ಗ್ರೀಕ್, ಫ್ರೆಂಚ್, ಇಟಾಲಿಯನ್, ಲ್ಯಾಟಿನ್, ಪರ್ಷಿಯನ್, ಜಪಾನಿ, ತಮಿಳು, ತೆಲುಗು, ಪ್ರಾಕೃತ, ಪಾಲಿ ಭಾಷೆಗಳನ್ನು ಪೈಗಳು ಕಲಿತಿದ್ದರು.

ಪರ್ಷಿಯನ್ ಭಾಷೆಯ ಉಮರ್ ಖಯ್ಯಾಂನ ಚೌಪದಿ 'ರೂಬಾಯಿಯಾತ್'ನ್ನು ಕನ್ನಡಕ್ಕೆ ಅನುವಾದಿಸಿದರು. ಡಿ.ವಿ.ಜಿ.ಯವರು ನಂತರ ಈ ಕೃತಿಯನ್ನು 'ಉಮರನ ಒಸಗೆ' ಎಂದು ಅನುವಾದಿಸಿದ್ದಾರೆ. ಈ ಕೃತಿಯನ್ನು ಇಂಗ್ಲಿಷ್‌ನಲ್ಲಿ ಜಾನ್ ಫಿಟ್ಜೆರಾಲ್ಡ್ ಅನುವಾದಿಸಿದ ನಂತರ, ಅದನ್ನು ಆಧಾರಿಸಿ ಈ ಕೃತಿಯನ್ನು ಪ್ರಪಂಚದಲ್ಲಿ ಅನೇಕ ಭಾಷೆಗಳಲ್ಲಿ ಅನೇಕರು

ಅನುವಾದಿಸಿದ್ದಾರೆ. ಪೈಯವರು ಪರ್ಶಿಯನ್ ಕಲಿತು, ಖಯ್ಯಾಂನ ಮೂಲ ಕೃತಿಯನ್ನು ಅನುವಾದಿಸಿದ್ದಾರೆ.

ಇಲ್ಲಿ ರೆಂಬೆಯ ನೆಳಲಲಿ ಇನಿ ರೊಟ್ಟಿಯೊಂದು
ಕಳ್ಳ ಬಿಂದಿಗೆಯೊಂದು, ಸವಿಗಬ್ಬಮೊಂದ
ನೀನೆನ್ನ ಬಳಿಯೆ ಕಾಡಲಿ ಹಾಡುವಂದು
ಕಾಡೆ ಗಡ ಸಗ್ಗದಿಂದೆನಗೆ ಲೇಸಂದು

ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ' ಸರಳರಗಳೆ ಎಂಬ ಛಂದಸ್ಸಿನಲ್ಲಿ ರಚಿತವಾಗಿರುವ ಮಹಾಕಾವ್ಯ. ಕುವೆಂಪು ಅವರಿಗಿಂತ ಮೊದಲು ಸರಳರಗಳೆ ಬಳಸಿ ಗೋವಿಂದ ಪೈ 'ಗೊಲ್ಗೊಥಾ' ಮಹಾಕಾವ್ಯ ರಚಿಸಿದ್ದಾರೆ. ಈ 377 ಸಾಲುಗಳ ಕಾವ್ಯವನ್ನು ಇಂಗ್ಲಿಷಿನಲ್ಲಿ epic fragment ಅಥವಾ brief epic ಎಂದು ಕರೆದರೆ ಕನ್ನಡದಲ್ಲಿ ಮಹಾಕಾವ್ಯಖಂಡ ಎನ್ನಬಹುದು. ಏಸುವನ್ನು ಶಿಲುಬೆಗೇರಿಸಿದ ಸ್ಥಳವೇ ಈ ಗೊಲ್ಗೊಥಾ.

ಗೋವಿಂದ ಪೈಯವರು ಬುದ್ಧನ ಅವಸಾನವನ್ನು 'ಭಗವಾನ್ ಬುದ್ಧ' ಕೃತಿಯಲ್ಲಿ ವಿವರಿಸಿದ್ದಾರೆ. 'ವೈಶಾಖ ಶುದ್ಧ ಪೂರ್ಣಿಮೆ, ಬುದ್ಧ ಜನಿಸಿದ್ದು, ಜ್ಞಾನೋದಯ ಹೊಂದಿದುದು, ಕೊನೆಗೆ ಮರಣ ಹೊಂದಿದ್ದು' ಹೀಗೆ ಬುದ್ಧನ ಬಗ್ಗೆ ವಿವರಗಳು ಜಿ.ಪಿ. ರಾಜರತ್ನಂರವರ ಬಳಿಯಿದ್ದ ಪಾಲಿ ಭಾಷೆಯಲ್ಲಿತ್ತು. ರಾಜರತ್ನಂರವರಿಂದ ಪುಸ್ತಕ ಪಡೆದು, ಸಿಂಹಳದ ಓರ್ವ ಬುದ್ಧ ಸನ್ಯಾಸಿಯಿಂದ ಪಾಲಿ ಭಾಷೆ ಕಲಿತು ಈ ಕೃತಿ ರಚಿಸಿದ್ದಾರೆ.

ಪೈಯವರು ಶ್ರೀಕೃಷ್ಣನ ಅಂತ್ಯವನ್ನು ಕುರಿತಂತೆ 'ಪ್ರಭಾಸ' ಎಂಬ ಕೃತಿಯನ್ನು, ಗಾಂಧಿಯವರ ಮರಣದ ಸಂದರ್ಭವನ್ನು ಆಧರಿಸಿ 'ದೆಹಲಿ ಅಥವಾ ಮಹಾತ್ಮನ ಕಡೆಯ ದಿನ' ಎಂಬ ಕವಿತೆ ರಚಿಸಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಸಕ್ತಿ ವಹಿಸಿದ್ದ ಪೈಯವರು ಸ್ವಾತಂತ್ರ್ಯಾನಂತರ ಭಾರತದ ಸ್ಥಿತಿ ಕಂಡು, ರಾಹು ಬದಲು ಕೇತು ಬಂದಂತಾಯ್ತು ಎಂದು ನಿಟ್ಟುಸಿರು ಬಿಟ್ಟಿದ್ದಾರೆ.

ಏನ ತೋರಿಸಿದೆ ಎಮಗೆ ಮೇಣ್ ಏನನಿತ್ತೆ?
ಕಳಕೊಂಡ ಬಿಡುಗಡೆಯ ನಮಗಿತ್ತೆ, ತಂದೆ!
ಆದರೆ ಈಗಣ ಕತೆಯ ಬಲ್ಲೆಯಾ ಮತ್ತೆ,
ರಾಹುವನು ತೊಲಗಿಸಿದೆ, ಕೇತುವನು ತಂದೆ


ಮಹಾಯುದ್ಧ, ಸಾವು–ನೋವು ನೋಡಿ ಪೈಯವರ ಕವಿ ಮನಸ್ಸು ತಲ್ಲಣ ಗೊಳ್ಳುತ್ತದೆ.

ಈ ಯುದ್ಧ ಸರ್ವಥಾ ಅಂತಿಮ ಯುದ್ಧವಲ್ಲ
ಹೊಸತೆನಿತೊ ಯುದ್ಧಗಳ ತಾಯಿ, ಮುತ್ತಾಯಿ!
ಪರರ ಬಿಡುಗಡೆಯನಡಿಮೆಟ್ಟಿ, ಜಗವೆಲ್ಲ
ತನಗೆ ತನಗೆಂಬ ಮನುಜಾ, ಸಾಯೋ ಸಾಯಿ

ಗೋವಿಂದ ಪೈಯವರು ಮಹಾಭಾರತದ ಏಕಲವ್ಯನ ಕುರಿತ 'ಹೆಬ್ಬೆರಳು' ನಾಟಕದಲ್ಲಿ ಗ್ರೀಕ್ ನಾಟಕಗಳಲ್ಲಿ ಕಂಡು ಬರುವ ಮೇಳವನ್ನು ಅಳವಡಿಸಿದ್ದಾರೆ. ಪೈಯವರು ನಾಟಕದ ಹಿನ್ನೆಲೆಯ ಹಾಡುಗಾರರನ್ನು ಗೊಂದಳದವರು (chorus) ಎಂದು ಉಲ್ಲೇಖಿಸುತ್ತಾರೆ. ಪೈಯವರ ಮತ್ತೊಂದು ನಾಟಕ 'ಚಿತ್ರಭಾನು ಅಥವಾ 1942', 'ಬ್ರಿಟೀಷರೆ ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಹುಬ್ಬಳ್ಳಿಯಲ್ಲಿ ಪೋಲೀಸರ ಗುಂಡಿಗೆ ಒಬ್ಬ ವಿದ್ಯಾರ್ಥಿ ಬಲಿಯಾಗುತ್ತಾನೆ. ಈ ಘಟನೆಯ ಪ್ರೇರಣೆ ಯಿಂದ ರಚಿತವಾದ ನಾಟಕ 1942. 1942ರ ಚಿತ್ರಭಾನು ಸಂವತ್ಸರದ ಉಲ್ಲೇಖವೇ ನಾಟಕದ ಹೆಸರಾಗಿದೆ.

ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್‌ನವರು ತಮ್ಮಲ್ಲಿ ಮುದ್ರಿತವಾಗುತ್ತಿದ್ದ ಕನ್ನಡ ಪುಸ್ತಕಗಳೆಲ್ಲವನ್ನು ಪೈಯವರಿಗೆ ಕಳುಹಿಸಿ ಕೊಡುತ್ತಿದ್ದರು. ದೇಶ ವಿದೇಶಗಳಿಂದ ತಮ್ಮ ಆಸಕ್ತಿಗೆ, ಅಧ್ಯಯನಕ್ಕೆ ಬೇಕೆಂದು ಕಂಡುಬಂದ ಎಲ್ಲಾ ಭಾಷೆಯ ಪುಸ್ತಕಗಳನ್ನು ತರಿಸಿಕೊಳ್ಳುತ್ತಿದ್ದರು. ತಮ್ಮ ಸಿರಿಯ ಸದ್ಬಳಕೆಗೆ ಆಸ್ಥೆ ವಹಿಸುತ್ತಿದ್ದರು. ಜಗತ್ತಿನ ನಲವತ್ತೂರಕ್ಕೂ ಹೆಚ್ಚು ಭಾಷೆಗಳ ಐದು ಸಾವಿರದಷ್ಟು ಪುಸ್ತಕಗಳು ಗೋವಿಂದ ಪೈಯವರ ಸಂಗ್ರಹದಲ್ಲಿ ಇದ್ದವು. ಪೈಯವರ ಜೀವಿತದ ತರುವಾಯ ಅವರ ಎಲ್ಲ ಗ್ರಂಥಗಳು ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಸ್ಥಾಪಿಸಲಾಗಿರುವ 'ಗೋವಿಂದ ಪೈ ಸಂಶೋಧನಾ ಕೇಂದ್ರ'ಕ್ಕೆ ಕೊಡುಗೆಯಾಗಿ ನೀಡಲಾಯಿತು. ವಿದ್ಯಾರ್ಥಿಗಳಿಗೆ, ಪ್ರಾಧ್ಯಾಪಕರಿಗೆ, ಸಂಶೋಧನಾಸಕ್ತರಿಗೆ ಇದು ಪೈಯವರ ವಿಶೇಷ ಕೊಡುಗೆ. ಪೈಗಳ ಬಗ್ಗೆ ಹೆಚ್ಚಿನ ಮಾಹಿತಿ ನನಗೆ ಶ್ರೀ ಟಿ.ಎಸ್. ಗೋಪಾಲರಿಂದ ದೊರೆಯಿತು. ಅವರಿಗೆ ನಾನು ಋಣಿ. 23 ಭಾಷೆ ಅರಿತ, 5000 ಪುಸ್ತಕ ಸಂಗ್ರಹ ಮಾಡಿದ್ದ ಕನ್ನಡದ ಪ್ರಥಮ ರಾಷ್ಟ್ರಕವಿ ಎಂದು ಆದರಿಸಲ್ಪಟ್ಟ, ಸರಳ, ಸಜ್ಜನ ಗೋವಿಂದ ಪೈ, ಅಪರೂಪದಲ್ಲಿ ಅಪರೂಪದ ಸಾಹಿತಿ. ಈ ಮೇಧಾವಿ, ಹಿರಿಯರ ಪರಿಚಯ ಮಾಡುವುದು ನನಗೆ ದೊರೆತ ಸುವರ್ಣ ಅವಕಾಶವೆಂದು ಭಾವಿಸುತ್ತೇನೆ.

2



ಜಿ.ಎಸ್. ಶಿವರುದ್ರಪ್ಪ

ಜಿ.ಎಸ್. ಶಿವರುದ್ರಪ್ಪ

ರಾಷ್ಟ್ರಕವಿ

ಅರಿವಿನ ಗುರು, ಶ್ರೇಷ್ಠ ಅಧ್ಯಾಪಕ, ವಿಮರ್ಶಕ, ಚಿಂತಕ ಇವೆಲ್ಲಕ್ಕಿಂತ ಮುಖ್ಯವಾಗಿ ಕವಿಯಾಗಿ ಜಿ.ಎಸ್. ಶಿವರುದ್ರಪ್ಪ ನವರು 'ಸಾಮಗಾನ'ದ ಶಿವರುದ್ರಪ್ಪ ನವರೆಂದೇ ಪ್ರಸಿದ್ಧರಾಗಿ ಕನ್ನಡ ಮನಸ್ಸುಗಳಲ್ಲಿ ಶಾಶ್ವತವಾಗಿ ನೆಲೆಯೂರಿದ್ದಾರೆ. ರಾಷ್ಟ್ರಕವಿ ಶಿವರುದ್ರಪ್ಪನವರ 'ಮುಂಬೈ ಜಾತಕ' ಕವಿತೆಯಿಂದ ಅವರ ಬಗ್ಗೆ ಅರಿಯಲು ಪ್ರಾರಂಭಿಸೋಣ.

ಹುಟ್ಟಿದ್ದು: ಆಸ್ಪತ್ರೆಯಲ್ಲಿ.

ಬೆಳೆದದ್ದು: ಬಸ್ಸು, ಟ್ರಾಂ, ಕಾರು, ಟ್ಯಾಕ್ಸಿ,
ಎಲೆಕ್ಟ್ರಿಕ್ ಟ್ರೇನುಗಳಲ್ಲಿ.

ಕುಡಿದದ್ದು: ಕಾಣದೆಮ್ಮೆಯ ಕೆಚ್ಚಲು ಕರೆದು
ಕಳುಹಿಸಿದ ಬಾಟ್ಲಿಯ ಹಾಲು,
ಗ್ರೈಪ್ ಸಿರಪ್, ಹಾರ್ಲಿಕ್ಸ್ ಇತ್ಯಾದಿ.

ಕಂಡಿದ್ದು: ಬೆಳಗಿಂದ ಸಂಜೆಯತನಕ ಲಕ್ಷ ಚಕ್ರದ
ಉರುಳು ಅವಸರದ ಹೆಜ್ಜೆಯ
ಮೇಲೆ ಸರಿವ ಸಾವಿರ ಕೊರಳು.

ಕಲಿತದ್ದು: ಕ್ಯೂ ನಿಲ್ಲು, ಫುಟ್‌ಪಾತಿನಲ್ಲೇ ಸಂಚರಿಸು,
ರಸ್ತೆ ದಾಟುವಾಗೆಚ್ಚರಿಕೆ, ಓಡು, ಎಲ್ಲಿಯೂ

ನಿಲ್ಲದಿರು; ಹೇಗೋ ಅವರಿವರ ತಳ್ಳಿ ಮುನ್ನುಗ್ಗು,
ಎಲ್ಲಾದರೂ ಸರಿಯೆ, ಬೇರೂರು, ಹೀರು.

ತಂದೆ: ಬೆಳಗಿನಿಂದ ಸಂಜೆಯ ತನಕ ಕಣ್ಮರೆಯಾಗಿ
ಒಮ್ಮೊಮ್ಮೊ ರಜಾ ದಿನಗಳಲ್ಲಿ ಕಣ್ಣಿಗೆ ಕಂಡು
ಕುಳಿತು ಕೆಮ್ಮುವ ಪ್ರಾಣಿ.

ವಿದ್ಯೆ: ಶಾಲೆ ಕಾಲೇಜುಗಳು ಕಲಿಸಿದ್ದು, ದಾರಿ ಬದಿ
ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು,
ರೇಡಿಯೋ ಸಿಲೋನ್ ವ್ಯಾಪಾರ
ವಿಭಾಗ ಶಿಫಾರಸು ಮಾಡಿದ್ದು,
ನೀನಾಗಿ, ಕಲಿತದ್ದು ಬಲು ಕಡಿಮೆ,
ಬಸ್ ಸ್ಟಾಪಿನಲಿ ನಿಂತ
ಬಣ್ಣಗಳ ಕಡೆಗೆ ಕಣ್ಣಾಡಿಸುವುದೊಂದನ್ನು
ಹೊರೆತು.

ಜೀವನ: ಈ ಲಕ್ಷ ದಾರಿಗಳ ಚದುರಂಗದಾಟದಲಿ, ನೂರು
ಬೆಳಕಿನ ಕೆಳಗೆ ಯಾರದೋ ಕೈಗೊಂಬೆಯಾಗಿ
ಮುಂದುವರಿಯುವುದು, ಏಳುವುದು, ಬಟ್ಟೆಯಲಿ
ಮೈ ತುರಕಿ ಓಡುವುದು; ರೈಲನೋ, ಬಸ್ಸನೋ
ಹಿಡಿಯುವುದು.

ಮುಂಬೈಯಲ್ಲಿ ಸುಮಾರು ಎರಡು ಬಾರಿ ಎರಡೆರಡು ವರುಷ ಕಳೆದ ನನಗೆ ಮುಂಬೈ ಜಾತಕ ಒಂದು ವಸ್ತುಸ್ಥಿತಿ. ಆ ವಸ್ತು ಸ್ಥಿತಿಯಲ್ಲಿ, 'ಹೇಗಾದರೂ ಸರಿ ಬೇರೂರು, ಹೀರು' ಇದು ಕಾರ್ಮಿಕರ ಮಾತುಗಳು. ಜೀವನದಲ್ಲಿ ಎಲ್ಲ ರಂಗದಲ್ಲೂ ಕೆಲವರು ಅವಶ್ಯವಾಗಿ ಬಿಡುತ್ತಾರೆ. ಮುಂದೆ ಅವರು ಅದರಲ್ಲೇ ಹೆಚ್ಚು ಪಡೆಯುತ್ತಾ ಸಾಗುತ್ತಾರೆ ಎನ್ನುವುದು ಕಟು ಸತ್ಯ. ತಂದೆ

'ಒಮ್ಮೊಮ್ಮೆ ರಜಾ ದಿನಗಳಲ್ಲಿ ಕಾಣಿಸಿಕೊಂಡು ಮೂಲೆಯಲ್ಲಿ ಕುಳಿತು ಕೆಮ್ಮುವ ಪ್ರಾಣಿ' ಮುಂಬೈಯಲ್ಲಿ ದೂರದಿಂದ ಕುರಿಗಳಂತೆ ಟ್ರೇನ್ನಲ್ಲಿ ಸಾಗಿ, ಸುಸ್ತಾಗಿ ರಜೆ ದಿನ ವಿಶ್ರಾಂತಿ ತೆಗೆದುಕೊಳ್ಳುವ ಜೀವ, 'ರೇಡಿಯೋ ಸಿಲೋನು' 1970ರಲ್ಲಿ ಕೇಳುತ್ತಿದ್ದವರಿಗೆ ಅಲ್ಲಿಯ ಹಾಡುಗಳ ಬಗ್ಗೆ ಎಂದಿಗೂ ನೆನಪಿರುತ್ತದೆ. ಮುಂಬೈ ಜೀವನ ಅನುಭವಿಸಿದವರೆಲ್ಲಾ ನೈಜ ಎನ್ನುವ ಕವನವಿದು.

ಚಲನಚಿತ್ರದಲ್ಲಿ, ಭಾವಗೀತೆಗಳ ಕಾರ್ಯಕ್ರಮದಲ್ಲಿ ಎಲ್ಲರ ಹೃದಯ ಮಂದಿರದಲ್ಲಿ ಒಳಹೊಕ್ಕಿರುವ 'ವೇದಾಂತಿ ಹೇಳಿದನು' ಕವನ ಅವಲೋಕಿಸೋಣ.

ವೇದಾಂತಿ ಹೇಳಿದನು
ಹೊನ್ನೆಲ್ಲ ಮಣ್ಣು ಮಣ್ಣು
ಕವಿಯೊಬ್ಬ ಹಾಡಿದನು
ಮಣ್ಣೆಲ್ಲ ಹೊನ್ನು ಹೊನ್ನು

ಈ ನಾಲ್ಕು ಸಾಲುಗಳ ನುಡಿ ಸಣ್ಣ ಮಕ್ಕಳಿಗೂ ಅರ್ಥ ವಾಗುತ್ತದೆ. ಇಂತಹ ಕವಿತೆಯ ಸಾಲುಗಳನ್ನು ಓದಲು, ಅರ್ಥಮಾಡಿಕೊಳ್ಳಲು ಕಷ್ಟಪಡಬೇಕಾಗಿಲ್ಲ. ಆದರೆ, ಇಂತಹ ಸರಳ ನುಡಿಗಳಲ್ಲಿ ಹೇಳಿರುವ ಜೀವನ ಮೌಲ್ಯಗಳು ಅತ್ಯಂತ ಆಳವಾದ ಆಲೋಚನೆಗಳಿಂದ ಕೂಡಿದೆ. ಕವಿ ಮತ್ತು ವೇದಾಂತಿ ಇಬ್ಬರೂ ಬೇರೆ ಬೇರೆಯೆಂಬುದನ್ನು ಪ್ರಾರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾರೆ. ಕವಿ ತನ್ನ ಸಮಕಾಲೀನ ಜನ ಸಮುದಾಯವನ್ನು ಪ್ರತಿನಿಧಿಸಿದರೆ, ವೇದಾಂತಿ ಹಿಂದಿನ ಕಾಲದ ಗ್ರಂಥಪ್ರಾಮಾಣ್ಯಕ್ಕೆ ಶರಣಾದವನಾಗಿದ್ದಾನೆ. ಕವಿ ಮೂರ್ತ, ವೇದಾಂತ ಅಮೂರ್ತ. ಸಿದ್ಧಾಂತಗಳಿಗಿಂತ ಬದುಕು ಹೆಚ್ಚು ಮುಖ್ಯ, ಅಮೂಲ್ಯ. ಆದರೆ ವೇದಾಂತದ

ಹಿನ್ನೆಲೆ, ಸದೃಶ ಅನೇಕ ವೇಳೆ ಪೂರಕ. ದ್ವಂದ್ವಗಳ ನಡುಗೆ ಸಾಗುವ ವಿಚಾರವಾದದಲ್ಲಿ ಪ್ರತಿಭೆಯ ವಿಶಾಲೀಕರಣ, ಹುರುಪು, ಚೈತನ್ಯ, ಅರ್ಥಪೂರ್ಣತೆಯನ್ನು ಶಿವರುದ್ರಪ್ಪನವರು ಕಾಣುತ್ತಾರೆ. ಈ ಕವನ ಜಿ.ಎಸ್.ಎಸ್. ಕಾವ್ಯಾಭಿವ್ಯಕ್ತಿ ಎಂತಹದೆಂಬುದನ್ನು ತೋರುತ್ತದೆ.

ಶಿವರುದ್ರಪ್ಪನವರು ಶಿಕಾರಿಪುರದ ವೀರಮ್ಮ ಮತ್ತು ಜಿ. ಶಾಂತವೀರಪ್ಪ ದಂಪತಿಗಳಿಗೆ 1926 ಫೆಬ್ರವರಿ 7ರಂದು ಜನಿಸಿದರು. ಇವರ ಪ್ರಾರಂಭಿಕ ಶಿಕ್ಷಣ ಹೊನ್ನಾಳಿಯಲ್ಲಿ, ಮಾಧ್ಯಮಿಕ ಬೆಲಗೂರಿನಲ್ಲಿ ಪ್ರೌಢ ಶಿಕ್ಷಣ ದಾವಣಗೆರೆಯಲ್ಲಿ, ಇಂಟರ್‌ಮೀಡಿಯಟ್ ತುಮಕೂರಿನಲ್ಲಿ. ಬಿ.ಎ. ಆನರ್ಸ್, 1949ರಲ್ಲಿ ಮಹಾರಾಜಾ ಕಾಲೇಜು, ಮೈಸೂರು. ಎರಡು ಚಿನ್ನದ ಪದಕಗಳು. ಎಂ.ಎ. ಕನ್ನಡ 1953ರಲ್ಲಿ ಮಹಾರಾಜಾ ಕಾಲೇಜು, ಮೈಸೂರು. ಎಂ.ಎ. ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದು ಹಾಗೂ ಬಿ.ಎಂ.ಶ್ರೀ. ರಜತ ಪದಕ, ಕೇಣಿ ಸಿದ್ದಪ್ಪ ಸುವರ್ಣ ಪದಕ ಪಡೆದರು. ಪಿಎಚ್.ಡಿ. 1960ರಲ್ಲಿ. ವಿಷಯ 'ಸೌಂದರ್ಯ ಸಮೀಕ್ಷೆ.'

ಶಿವರುದ್ರಪ್ಪನವರು 1943ರಲ್ಲಿ ಸಕಲೇಶಪುರದಲ್ಲಿ ವೃತ್ತಿ ಜೀವನ ಪ್ರಾರಂಭಿಸಿದರು. 1944ರಲ್ಲಿ ತಾಲ್ಲೂಕು ಕಛೇರಿ, ಗುಬ್ಬಿ ಮುಂದೆ ಉಪನ್ಯಾಸಕರಾಗಿ ದಾವಣಗೆರೆ, ಮೈಸೂರು, ಶಿವಮೊಗ್ಗ, ರೀಡರ್ ಆಗಿ ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ್, ನಂತರ ಬೆಂಗಳೂರು. 1970–86ರ ವರೆಗೆ ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು ಮತ್ತು ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಇವರು ಸೇರಿದಾಗ ಸಣ್ಣದಾಗಿದ್ದದ್ದು ಇವರು ಬಿಡುವ ವೇಳೆಗೆ ಒಂದು ಹೆಮ್ಮರವಾಗಿ ಕನ್ನಡ ಅಧ್ಯಯನ ಕೇಂದ್ರ ಮಾರ್ಪಟ್ಟಿತು.

1987–90ರ ವರೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರಿನ ಅಧ್ಯಕ್ಷರಾಗಿಯೂ 1994ರಿಂದ 95ರ ವರೆಗೆ ಸಂದರ್ಶನ ಪ್ರಾಧ್ಯಾಪಕರು. ಕುವೆಂಪು ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರಿನಲ್ಲಿ ಗೌರವ ಸೇವೆ.

ಶಿವರುದ್ರಪ್ಪನವರು ಸೌಮ್ಯಮೂರ್ತಿ. 'ನಾನೇಕೆ ಬರೆಯುತ್ತೇನೆ' ಎಂಬ ಕವಿತೆಯಲ್ಲಿ ಶಿವರುದ್ರಪ್ಪನವರು ತಮ್ಮ ಬರವಣಿಗೆಯ ಮೂಲ ಉದ್ದೇಶದ ಬಗ್ಗೆ ತಿಳಿಸುತ್ತಾರೆ.

ನಾನು ಬರೆಯುತ್ತೇನೆ
ನಿಂತ ನೀರಾಗದೆ ಮುಂದಕ್ಕೆ
ಹರಿಯುವುದಕ್ಕೆ
ಎಲ್ಲದರ ಜೊತೆ ಬೆರೆಯುವುದಕ್ಕೆ

ಅವರ ಕವಿತೆಯ ಈ ಸಾಲುಗಳಲ್ಲಿ ಅಭಿವ್ಯಕ್ತಿಯ ಉದ್ದೇಶ ಸ್ಪಷ್ಟವಾಗಿದೆ. ತನ್ನನ್ನು ತಾನು ಕಾಣಲು, ತನಗನಿಸಿದ್ದನ್ನು ವ್ಯಕ್ತಪಡಿಸಲು ತಾವು ಬರೆಯುವುದಾಗಿ ತಿಳಿಸಿ,

ನಾನು ಬರೆಯುತ್ತೇನೆ
ನನ್ನನ್ನು ನಾನು ಕಂಡುಕೊಳ್ಳುವುದಕ್ಕೆ
ಮತ್ತೆ ಕಾಣಿಸುವುದಕ್ಕೆ
ನಿಮ್ಮೊಂದಿಗೆ ಸಂವಾದಿಸುವುದಕ್ಕೆ

ಎಂದಿದ್ದಾರೆ. 'ಓರೆಗಲ್ಲು' ಎಂಬ ಕವಿತೆಯಲ್ಲಿ 'ನಿನ್ನ ಆ ದಂಡು ದಾಳಿಯನೆಲ್ಲ ಅಲ್ಲೇ ಬಿಟ್ಟು ಬಾ ಇಲ್ಲಿ ಕುಳಿತುಕೊ, ಮಾತನಾಡೋಣ' ಎಂದು ಕವಿಯನುದ್ದೇಶಿಸಿ ನುಡಿದಿದ್ದಾರೆ. ಆತ್ಮಾವಲೋಕನ ಮತ್ತು ಸಂವಾದ ಗುಣ ಶಿವರುದ್ರಪ್ಪನವರ ಕಾವ್ಯದ ಮುಖ್ಯ ಲಕ್ಷಣವಾಗಿದೆ. ಹೊಸದನ್ನು ಕಲಿಯಲು ನಮ್ಮ ವಾದವನ್ನು ಮೊದಲು ಬದಿಗಿಟ್ಟು ವಿಚಾರ ಅರ್ಥಮಾಡಿ

ಕೊಳ್ಳಬೇಕು ಎಂಬ ಭಾವ. ದೇವರ ಬಗ್ಗೆ ಶಿವರುದ್ರಪ್ಪನವರ ನಿಲುವು ಹುಡುಕಿದಾಗ 'ಅನ್ವೇಷಣೆ' ಹೆಸರಿನ ಎರಡು ಪದ್ಯಗಳನ್ನು ಉಲ್ಲೇಖಿಸ ಬಯಸುತ್ತೇನೆ.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ–ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ

ಈ ಕವಿತೆಯಲ್ಲಿ 'ಇಲ್ಲದ' ದೇವರನ್ನು ಕಲ್ಲು ಮಣ್ಣಿನ ಗುಡಿಯಲ್ಲಿ ವ್ಯರ್ಥವಾಗಿ ಹುಡುಕುವ ಬದಲು, ಈ ದೇವರ ನೆಲೆ ನಮ್ಮ ಬದುಕಿನ ಪ್ರೀತಿ, ಸ್ನೇಹದಲ್ಲಿದೆ ಎಂದು ಅಭಿಪ್ರಾಯ ಪಡುತ್ತಾರೆ. 'ಅನ್ವೇಷಣೆ' ಎಂಬ ಮತ್ತೊಂದು ಕವನದಲ್ಲಿ

ದಿವ್ಯಪ್ರೇಮಕೆ ದೊರೆವನಾತನು
ಶ್ರದ್ಧೆಗಳಿಲ್ಲದೆ ಒಲಿಯನು
ವೇದ ಶಾಸ್ತ್ರ ಪುರಾಣ
ದರ್ಶನದಾಚೆಗೆ ನಿಂತಾತನು

ಎಂದಿದ್ದಾರೆ. ಪ್ರೇಮಕ್ಕೆ ಮತ್ತು ಶ್ರದ್ಧೆಗೆ ದೇವರು ಒಲಿಯುವನು ಎಂಬುದು ಶಿವರುದ್ರಪ್ಪನವರ ಭಾವ.

ಮತ್ತೊಂದು ಕವನ 'ಎಲ್ಲಿ ಅರಸುವೆ ನನ್ನ' ದೇವರು ತನ್ನ ಭಕ್ತನಲ್ಲಿ ಪ್ರಶ್ನಿಸುತ್ತಾನೆ.

ಎಲ್ಲಿ ಅರಸುವೆ ನನ್ನ, ಓ ನನ್ನ ಕಿಂಕರನೆ
ನಿನ್ನ ಬಳಿಯೇ ನಾನು ಇರುತಲಿರುವೆ
ನಾನು ನಿನ್ನೊಂದಿಗೆ ಇದ್ದರೂ ನನಗಾಗಿ
ಎಲ್ಲೋ ದೂರದಿ ಹುಡುಕಿ ಬಳಲುತಿರುವೆ

ಶಿವರುದ್ರಪ್ಪನವರು 'ಶ್ರದ್ಧೆ ಎಲ್ಲಿರುವುದೋ ಅಲ್ಲಿ ದೊರೆಯುವೆ ನಾನು, ನನಗಾಗಿ ಹುಡುಕಿದರೆ ಸಿಗುವೆ ನಾನು' ಎಂದು ದೇವರು ತಿಳಿಸುತ್ತಾನೆ, ಎಂದು ಅಭಿಪ್ರಾಯ ಪಡುತ್ತಾರೆ.

ಶಿವರುದ್ರಪ್ಪನವರ ಕಾವ್ಯ ಮುಖ್ಯವಾಗಿ ಎರಡು ಮಾರ್ಗಗಳಲ್ಲಿ ಬೆಳೆದಿದೆ, ಒಂದು ಕವಿತೆಯ ಮಾರ್ಗ ಮತ್ತೊಂದು ಭಾವಗೀತೆಯ ಮಾರ್ಗ. ಇವೆರಡೂ ಮಾರ್ಗಗಳಲ್ಲಿ ಇವರ ನಡೆ, ತುಂಬ ನೇರ-ಸರಳ ಹಾಗೂ ಸ್ಪಷ್ಟವಾಗಿದೆ.

ಶಿವರುದ್ರಪ್ಪನವರ ಕಾವ್ಯ ಸಂಕಲನಗಳು:

ಸಾಮಗಾನ
ಚೆಲುವು-ಒಲವು
ದೇವಶಿಲ್ಪಿ
ದೀಪದ ಹೆಜ್ಜೆ
ತೀರ್ಥವಾಣಿ
ಕಾರ್ತಿಕ
ಅನಾವರಣ
ತೆರದದಾರಿ
ಗೋಡೆ
ಕಾಡಿನ ಕತ್ತಲಲ್ಲಿ
ಪ್ರೀತಿ ಇಲ್ಲದ ಮೇಲೆ
ಚಕ್ರಗತಿ
ವ್ಯಕ್ತಮಧ್ಯ

ಶಿವರುದ್ರಪ್ಪನವರ ಗೌರವ ಗ್ರಂಥಗಳು:

ಸ್ನೇಹ ಕಾರ್ತಿಕ
ಗೌರವ
ಹಣತೆ

ಜಿ.ಎಸ್. ಶಿವರುದ್ರಪ್ಪನವರು ಜೀವ ಸೃಷ್ಟಿಗೆ, ಸಾಹಿತ್ಯ ಸೃಷ್ಟಿಗೆ, ಕರುಣೆ, ವಿಶ್ವಾಸಗಳ ಉಗಮಕ್ಕೆ ಪ್ರೀತಿಯ ಅಗತ್ಯವಿದೆ ಎಂದು ತಿಳಿಸುತ್ತಾರೆ. ಅಷ್ಟೇ ಅಲ್ಲ, ನಮ್ಮ ನಿಮ್ಮ ಮನಸ್ಸು ಮರುಭೂಮಿಯಾಗದ ಹಾಗೆ ತಡೆಗಟ್ಟಲು ಪ್ರೀತಿ ಬೇಕೇ ಬೇಕು ಎಂಬುದು ಕವಿಯ ನಿಲುವು.

ಇಂದು ಜಗತ್ತಿನಲ್ಲಿ ಪ್ರೀತಿಯು ವಿರಳವಾಗಿ ಬಿಟ್ಟಿದೆ. ಕೌಟುಂಬಿಕ ನೆಲೆಯ ಪ್ರೀತಿಯ ಅಭಾವವನ್ನು ಗೋಡೆ ಕವನದಲ್ಲಿ ವ್ಯಕ್ತ ಪಡಿಸುತ್ತಾರೆ.

ಒಂದೊಂದು ಸಲ ನನಗೂ ನಿನಗೂ ನಡುವೆ
ಇದ್ದಕ್ಕಿದಂತೆ ಗೋಡೆ ಏಳುತ್ತದೆ
ಎಲ್ಲಿಂದಲೋ ಏನೊ ಇಟ್ಟಿಗೆಯ ಮೇಲೆ ಇಟ್ಟಿಗೆ ಬಂದು
ಕೂತು, ಕೂತಲ್ಲಿಯೇ ನಮ್ಮನ್ನು ಹೂತು
ಸುತ್ತಲೂ ಗೋಡೆ ಕಟ್ಟುತ್ತವೆ

ಸಾಮಾಜಿಕ ಬದುಕಿನಲ್ಲಿನ ಪ್ರೀತಿಯ ಕೊರತೆಯನ್ನು 'ವ್ಯರ್ಥ' ಕವನ ಬಿಂಬಿಸುತ್ತದೆ.

ಇಲ್ಲ, ನಾವೂ ನೀವೂ ಸೇರಲೇ ಇಲ್ಲ
ಮುಖಕ್ಕೆ ಮುಖ, ಎದೆಗೆ ಎದೆ ಹತ್ತಿರ ತಂದು
ಮಾತಾಡಲೇ ಇಲ್ಲ
ಇದ್ದ ಸೇತುವೆ ಮುರಿದು
ಅಲ್ಲಿನ ಗಾಡಿ ಅಲ್ಲೇ
ಇಲ್ಲಿನ ಗಾಡಿ ಇಲ್ಲೆ

ಚೆಲುವು ಒಲವಿಲ್ಲದೆ ಬದುಕಿಲ್ಲ ಎಂಬುದು ಶಿವರುದ್ರಪ್ಪ ನವರ ತಾತ್ವಿಕತೆ ಯಾಗಿದೆ.

ಶಿವರುದ್ರಪ್ಪನವರು 'ಆವಾಹನೆ' ಕವಿತೆಯಲ್ಲಿ,

ಎಲ್ಲೋ ದೂರದಿ ಚಿಕ್ಕ ಗೆಜ್ಜೆಗಳ
ಕಟ್ಟಿ ನರ್ತಿಸುವ ಹೆಜ್ಜೆಗಳೇ
ಬನ್ನಿ ನನ್ನೆಡೆಗೆ, ಲಾಸ್ಯವನಾಡಿರಿ
ಚಿಮ್ಮಲಿ ನಲಿವಿನ ಬುಗ್ಗೆಗಳೇ

ಎಂದು ಪ್ರತಿಕ್ರಿಯಿಸುತ್ತಾರೆ.

'ಬನ್ನಿ ನನ್ನ ಹೃದಯಕೆ' ಕವನದಲ್ಲಿ ಶಿವರುದ್ರಪ್ಪನವರು,

ದೀಪವಿರದ ಹಾದಿಯಲ್ಲಿ
ತಡವರಿಸುವ ನುಡಿಗಳೇ
ಕಂಬನಿಗಳ ತಲಾತಲದಿ
ನಂದುತಿರುವ ಕಿಡಿಗಳೇ
ಉಸಿರನಿಡುವೆ
ಹೆಸರ ಕೊಡುವೆ
ಬನ್ನಿ ನನ್ನ ಹೃದಯಕೆ
ಬನ್ನಿ ನನ್ನ ಹೃದಯಕೆ

'ಸ್ವಗತ' ಎಂಬ ಕವಿತೆಯಲ್ಲಿ ಅವರು ತಮ್ಮ ಕವಿತೆಗಳನ್ನು ಸ್ವವಿಮರ್ಶೆ ಮಾಡಿದ್ದಾರೆ.

ಹಿಂದೆ ಬರೆದದ್ದನ್ನೆಲ್ಲ
ಈಗ ತೆನೆ ಬಿಡಿಸಿ ಕೇರಿ ತೂರಿ ನೋಡಿದರೆ
ಕಾಳಿಗಿಂತ ಜೊಳ್ಳೇ ಹೆಚ್ಚೇನೋ ಅನ್ನಿಸುತ್ತದೆ.
ಅದನ್ನೇ, ರಾಗ–ತಾಳ–ಪಲ್ಲವಿಗಳಲ್ಲಿ ಕುರುಕುವ
ತಲೆಯಿರದ ಕಂಠಗಳನ್ನು ಕೇಳಿ
ನಗೆ ಬರುತ್ತದೆ

ಶಿವರುದ್ರಪ್ಪನವರ ಕಾವ್ಯ ಸುಭಗಗುಣವನ್ನೂ, ಗೇಯತೆ, ವೈಚಾರಿಕೆಯನ್ನೂ, ಸೃಜನಶೀಲತೆಯನ್ನೂ ಜೊತೆಗೆ ಭಾವನಾತ್ಮಕತೆಯನ್ನೂ ಮೈಗೂಡಿಸಿಕೊಂಡಿದೆ.

ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ ಕರ್ಮ ನನಗೆ
ಕೇಳುವವರಿಹರೆಂದು ನಾ ಬಲ್ಲೆನದರಿಂದ
ಹಾಡುವೆನು ಮೈದುಂಬಿ ಎಂದಿನಂತೆ
ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ

ತೃಪ್ತಿ ಕವನದಲ್ಲಿ ಶಿವರುದ್ರಪ್ಪನವರ ಈ ಭಾವ ಎಲ್ಲ ಸಾಹಿತ್ಯ ಆಸಕ್ತನಿಗೂ ಅರ್ಥಕೊಡುತ್ತದೆ. ಕಾವ್ಯ, ಹಾಡುಗಾರಿಕೆ, ಕಲೆ ನನ್ನ ಆಸಕ್ತಿ. ಅದು ನನಗಾಗಿ, ನನ್ನ ಸಂತೋಷಕ್ಕಾಗಿ.

ಬೇರೆಯವರಿಗೇ ಬದುಕುವ ನಾವು, ಬೇರೆಯವರ ತೊಳಲಾಟದಲ್ಲಿ ನಮ್ಮನ್ನು ನೋಡುವ ನಾವು, ಸಂತಸದಿಂದ ಹಾಡಿದಾಗ ನಮಗಾಗಿ ಹಾಡುತ್ತೇವೆ. ಅದೇ ಜೀವನ. ಬೇರೆಯವರ ಪರಿವೆ ನಮಗೆ ಬೇಡ. ಹಾಡುವ, ಕಾವ್ಯ ಸಂತಸದಲ್ಲಿ ಎಂದು ಎದೆಯಾಳದಿಂದ ಕವಿ 'ಹಾಡುವೆನು ಮೈದುಂಬಿ ನನಗಾಗಿ' ಎನ್ನುತ್ತಾರೆ. ಈ ಕವನ ಸಾಹಿತ್ಯ ಆಸಕ್ತರೆಲ್ಲರನ್ನು ಅಯಸ್ಕಾಂತದಂತೆ ಆಕರ್ಷಿಸಿದೆ.

ಎಲ್ಲ ಕಾಲದ, ಎಲ್ಲ ಮನಸ್ಸುಗಳನ್ನು ಪ್ರವೇಶಿಸಿದ ಶಿವರುದ್ರಪ್ಪನವರ ಕಾವ್ಯ ಜನಮನದ ಕಾವ್ಯವಾಗಿ, ಜನರಿಂದ ಅನೇಕ ಬಿರುದು ಗಳಿಸಿದೆ. ಶಿವರುದ್ರಪ್ಪನವರ 'ಮಾಸ್ಕೊದಲ್ಲಿ 22 ದಿನ' ಕೃತಿಗೆ 'ಸೋವಿಯತ್ ಲ್ಯಾಂಡ್ ನೆಹರೂ' ಪ್ರಶಸ್ತಿ ದೊರೆತಿದೆ.

- 1982ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
- 1984ರಲ್ಲಿ 'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
- 1997ರಲ್ಲಿ ಪ್ರೊ. ಭೂಸನೂರ ಮಠ ಪ್ರಶಸ್ತಿ, ಪಂಪ ಪ್ರಶಸ್ತಿ, ಗೊರೂರು ಪ್ರಶಸ್ತಿ.
- 2000ದಲ್ಲಿ ಡಾ. ಮಾಸ್ತಿ ಪ್ರಶಸ್ತಿ.
- 2006ರಲ್ಲಿ ಕರ್ನಾಟಕ ಸರ್ಕಾರದಿಂದ ರಾಷ್ಟ್ರಕವಿ ಪ್ರಶಸ್ತಿ.
- ಶಿವರುದ್ರಪ್ಪನವರಿಗೆ ಯುಜಿಸಿ ರಾಷ್ಟ್ರೀಯ ಉಪನ್ಯಾಸಕ ಪ್ರಶಸ್ತಿ ದೊರೆತಿದೆ.
- 1964ರ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ತುಮಕೂರು, ಅಧ್ಯಕ್ಷತೆ.
- 1992ರ 61ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ದಾವಣಗೆರೆ, ಅಧ್ಯಕ್ಷತೆ.
- 1986ರ ಮದರಾಸು ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆ.

ಶಿವರುದ್ರಪ್ಪನವರು ಕಾವ್ಯಸೃಷ್ಟಿಯ ಜೊತೆಜೊತೆಗೆ ಕಾವ್ಯ ಸ್ವರೂಪದ ಬಗ್ಗೆಯೂ ಅತಿ ಗಾಢವಾಗಿ ಚಿಂತಿಸಿದವರು. ಕವಿಯೇ ಹೊರಹಾಕುವ ಕಾವ್ಯಸ್ವರೂಪದ ಚಿಂತನೆಗಳಿಗೆ ಒಂದು ಅಧಿಕೃತತೆ ಇರುತ್ತದೆ. ಹೆತ್ತ ತಾಯಿಗೆ ತನ್ನ ಮಗುವಿನ ಬಗ್ಗೆ ಇರುವ ಅರಿವಿದ್ದಂತೆ. ಪಾಶ್ಚಾತ್ಯ ಗ್ರಂಥಗಳ, ವಿದ್ವತ್ ಗ್ರಂಥಗಳ ಅವಲೋಕನ, ವಿದ್ಯಾರ್ಥಿಗಳಿಗೆ ಬೋಧಿಸುವ ಸತ್ಕಾರ್ಯ, ಇವುಗಳ ಸಮ್ಮಿಲನದಿಂದ, 'ವಿಮರ್ಶೆಯ ಪೂರ್ವ–ಪಶ್ಚಿಮ, ಪರಿಶೀಲನ, ನವೋದಯ, ಕನ್ನಡ ಸಾಹಿತ್ಯ ಸಮೀಕ್ಷೆ, ಪ್ರತಿಕ್ರಿಯೆ, ಮಹಾಕಾವ್ಯ ಸ್ವರೂಪ ಎಂಬ ಗ್ರಂಥಗಳ ರಚನೆಯಾಗಿದೆ.

ಶಿವರುದ್ರಪ್ಪನವರ ವರ್ಣನೆ, ನಿರೂಪಣೆಗಳ ರೀತಿ ಆಕರ್ಷಕವಾದುದು, ವಿಚಾರಭರಿತವಾದುದು. ಪ್ರವಾಸ ಪ್ರಿಯರಾದ ಅವರು 'ಮಾಸ್ಕೊದಲ್ಲಿ 22 ದಿನ', 'ಗಂಗೆಯ ಗಿರಿಶಿಖರಗಳಲ್ಲಿ', 'ಅಮೆರಿಕದಲ್ಲಿ ಕನ್ನಡಿಗ', 'ಇಂಗ್ಲೆಂಡಿನಲ್ಲಿ ಚಾತುರ್ಮಾಸ್ಯ' ಎಂಬ ಪ್ರವಾಸ ಕಥನಗಳನ್ನು ನೀಡಿದ್ದಾರೆ.

ಶಿವರುದ್ರಪ್ಪನವರ ಸರಳ ಸಜ್ಜನ ಜೀವನ, ಸರಳ ಸುಂದರ ಕವನಗಳು, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಾಹಿತ್ಯ ವಾರ್ಷಿಕದ ಯೋಜನೆಗಳು, ಅವರ ದಕ್ಷ ಆಡಳಿತ, ಕಾವ್ಯ ಸೃಷ್ಟಿ, ಮೀಮಾಂಸ ಪ್ರಜ್ಞೆ, ಪ್ರವಾಸ ಕಥನ, ಮನಮುಟ್ಟುವ ಕವನಗಳು ಅವರನ್ನು ನಮ್ಮ ರಾಷ್ಟ್ರಕವಿಯಾಗಿ ಮಾಡಿದೆ.

ಮೈಸೂರು ಅನಂತಸ್ವಾಮಿಗಳ ಧ್ವನಿಯಲ್ಲಿ 'ಎದೆತುಂಬಿ ಹಾಡಿದೆನು', ಪಿ.ಬಿ. ಶ್ರೀನಿವಾಸ್ ಧ್ವನಿಯಲ್ಲಿ 'ವೇದಾಂತಿ ಹೇಳಿದನು', ಸಿ. ಅಶ್ವಥ್‌ರವರಿಂದ 'ಕಾಣದಾ ಕಡಲಿಗೆ ಹಂಬಲಿಸಿದೆ ಮನ' – ಹೀಗೆ ಅನೇಕ ಕಾರ್ಯಕ್ರಮಗಳಲ್ಲಿ ಶಿವರುದ್ರಪ್ಪನವರ ಕವನಗಳು ಪ್ರಚಲಿತ.

1960ರಲ್ಲಿ ಶಿವರುದ್ರಪ್ಪನವರ 'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ ನಾಲ್ಕು ಹನಿಯಚೆಲ್ಲಿ', 'ದಿನ ದಿನವು ಕಾದು ಬಾಯಾರಿ ಬೆಂದೆ...' ಕವನ ಬಹಳ ಪ್ರಚಲಿತವಾಗಿತ್ತು. ಅನೇಕ ವಿಮರ್ಶಕರು ಶಿವರುದ್ರಪ್ಪನವರ ಕಾವ್ಯಗಳೆನ್ನೆಲ್ಲಾ ಪರಿಗಣಿಸಿ ದಾಗ ಈ ಕವನ 'ಎದೆ ತುಂಬಿ ಹಾಡಿದೆನು', 'ದೀಪವಿರದ ದಾರಿಯಲ್ಲಿ', 'ಆಕಾಶದ ನೀಲಿಯಲ್ಲಿ' ಮತ್ತಿತರ ಕವನಗಳ ಗುಣಮಟ್ಟದ ಪ್ರೌಢಿಮೆಯನ್ನು ತೋರುವುದಿಲ್ಲ. ಆದರೆ 1955ರಲ್ಲಿ ಭಾವಗೀತೆಗಳ ಕೊರತೆ ಹೆಚ್ಚು ಇದ್ದುದರಿಂದ 'ಎಲ್ಲಿ ಹೋಗುವಿರಿ' ಕವನ ಪ್ರಸಿದ್ಧವಾಗಿತ್ತೆಂದು ಅಭಿಪ್ರಾಯ ಪಡುತ್ತಾರೆ.

ಸ್ನಾತಕೋತ್ತರ ಹಾಗೂ ಪದವಿ ತರಗತಿಗಳೆಂದು ಎರಡೂ ಹಂತಗಳಲ್ಲಿ ಪಠ್ಯಕ್ರಮದ ನವೀಕರಣ ಮತ್ತು ಪಠ್ಯಪುಸ್ತಕಗಳ ನಿರ್ಮಾಣದಲ್ಲಿ ಶಿವರುದ್ರಪ್ಪನವರು ಅನುಸರಿಸಿದ ವಿಧಾನಗಳು ದೂರಗಾಮಿ ಪರಿಣಾಮಗಳನ್ನು ಬೀರಿದವು.

ಎಂ.ಎ. ವಿದ್ಯಾರ್ಥಿಗಳಿಗೆ ಐಚ್ಛಿಕವಾಗಿ ವೆಸ್ಟರ್ನ್ ಲಿಟರೇಚರ್, ಶೈಲಿಶಾಸ್ತ್ರ, ಸಾಮಾಜಿಕ ಭಾಷಾಶಾಸ್ತ್ರ, ಸಂಸ್ಕೃತಿಯ ಅಧ್ಯಯನ, ಮಾನವಶಾಸ್ತ್ರ ಮುಂತಾದ ಹೊಸ ಹೊಸ ಅಧ್ಯಯನ ಶಿಸ್ತುಗಳನ್ನು ನೀಡಲಾಯಿತು. ಮುಕ್ತ ವಾತಾವರಣ ನಿರ್ಮಾಣ, ಸೃಜನಶೀಲತೆಗೆ ಪ್ರೋತ್ಸಾಹ ನೀಡಿ ಜಿ.ಎಸ್.ಎಸ್. ಕನ್ನಡದ ಸಾಹಿತಿಗಳನ್ನು ರೂಪಿಸಿದರು. ಅವರ ಗರಡಿಯಲ್ಲಿ ಪಳಗಿದ ಚಿದಾನಂದಮೂರ್ತಿ, ಹಂಪನಾ, ಎನ್.ಎಸ್.ಎಲ್., ಕೆ.ಎಂ.ಎಸ್., ಸುಮತೀಂದ್ರ ನಾಡಿಗ್, ವಿದ್ಯಾಶಂಕರ, ವೀರಣ್ಣ, ಕಾಳೇಗೌಡ ನಾಗವಾರ, ಕೆ.ವಿ. ನಾರಾಯಣ, ಬರಗೂರು ರಾಮಚಂದ್ರಪ್ಪ, ಕೆ.ಪಿ. ಭಟ್, ಡಿ.ಆರ್. ನಾಗರಾಜ್, ಬಸವರಾಜ ಕಲ್ಗುಡಿ, ಸಿದ್ದಲಿಂಗಯ್ಯ ಎಲ್ಲರೂ ಕೇವಲ ಹೆಸರುಗಳಲ್ಲ, ಸಮಕಾಲೀನ ಸಾಂಸ್ಕೃತಿಕ ಸನ್ನಿವೇಶವನ್ನು ರೂಪಿಸುತ್ತಿರುವ ಪ್ರಬಲರು.

ಕನ್ನಡ ವಿಭಾಗದ ಆಶ್ರಯದಲ್ಲಿ ಶಿವರುದ್ರಪ್ಪನವರು ನಡೆಸಿದ ವಿಚಾರ ಸಂಕಿರಣಗಳನ್ನು ಪ್ರತ್ಯೇಕವಾಗಿಯೇ ಪ್ರಸ್ತಾಪಿಸಬೇಕು. 1969ರಲ್ಲಿ ನಡೆಸಿದ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ಸುವರ್ಣ ಮಹೋತ್ಸವದ ವಿಚಾರ ಸಂಕಿರಣದಿಂದ ಮೊದಲಾಗಿ, ಸುಮಾರು ಇಪ್ಪತ್ತು ವರ್ಷಗಳ ಕಾಲ ಈ ಸಂಕಿರಣಗಳು ಕರ್ನಾಟಕದ ಸಾಹಿತ್ಯದ ಕ್ಯಾಲೆಂಡರ್‌ನ ಅತಿ ಮುಖ್ಯ ಅಂಗ. ಪ್ರಬಂಧ ಮಂಡನೆ, ಅನಂತರ ಪ್ರಶ್ನೋತ್ತರ ಮೌಲಿಕವಾಗಿರುತ್ತಿದ್ದವು. ಸಾಹಿತಿಗಳಿಗೆ, ಅದರಲ್ಲೂ ವಿಮರ್ಶಕ

ರಿಗೆ ಈ ಸಂಕಲನಗಳು ಕೆಲವು ಅವಕಾಶಗಳು. ಕೆಕೆ ಅನುವಾದಿಸಿದರು. ಶಿವರುದ್ರಪ್ಪನವರು ಕಾರ್ಯಕ್ರಮದ ಸಂಚಾ ಮಂಡಿಸಿದ್ದಾರೆ. ಆಗ. ಉಪನ್ಯಾಸಗಳನ್ನು ೨೦೦೩. ೩೦೩. ಮುದ್ರಿಸಿ. ಮುಂದಿನ ವರ್ಷದ ಕೆಲಸಗಳನ್ನು ಯೋಜನೆ ಮಾಡುತ್ತಿದ್ದರು. ಅವುಗಳಲ್ಲಿ ಪ್ರಮುಖವಾದುದು ಹೊಸಗನ್ನಡ ಕಾವ್ಯದ ಎರಡು ಸಂಪುಟಗಳು. ನವ ೭೦೦ ಅಧ್ಯಯನ. ಕವಿ ಬೇಂದ್ರೆ, ಶ್ರೀ ಕುವೆಂಪು, ಕರ್ನಾಟಕ ಸಂಸ್ಕೃತಿ. ಕಾದಂಬರಿಕಾರ ಕಾರಂತ, ಎಲ್ಲವೂ ಅವಿಸ್ಮರಣೀಯ.

ಬೇಂದ್ರೆಯವರೊಂದಿಗೆ ನಾವೂ ಹೇಳಬೇಕು 'ಎಲ್ಲಿ ಹೋದವೋ ಗೆಳೆಯಾ ಆ ಕಾಲ.' ಶಿವರುದ್ರಪ್ಪನವರ ತೆರೆದ ಮನ, ಅದಕ್ಕೆ ಸರಳವಾದ ಮನಸ್ಸು. ಪ್ರಲೋಭನೆಗಳಿಗೆ ಸೋಲದ ದೃಢತೆ ಮತ್ತು ಪವಿತ್ರಮಾಗಳು. ಅವರ ಅಗ್ಗಳಿಕೆಗಳು. ಶಿವರುದ್ರಪ್ಪನವರ ಈ ದೃಷ್ಟಿಕೋನ ಸರಿಯಾಗಿದೆ ಒಂದಾಗಿದೆ ಎಚ್.ಎಸ್. ರಾಘವೇಂದ್ರ ರಾಯರ 'ನಮಸ್ಕಾರ' ಪುಸ್ತಕಕ್ಕೆ ಅನಂತ ನಮಸ್ಕಾರ. ಈ ಸಮಯ ಕನ್ನಡ ಸಾಹಿತ್ಯದ ಸುಸಮಯ.

3



ಎಂ. ಗೋಪಾಲಕೃಷ್ಣ ಅಡಿಗ

ಎಂ. ಗೋಪಾಲಕೃಷ್ಣ ಅಡಿಗ

ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು
ಹೊಸ ನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ
ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ
ಉತ್ಸಾಹಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು

ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನು
ಸುಖದ ಬೀಡೊಂದನು

ಕ್ರಾಂತಿಕಾರಿಯಾದರೂ ಪ್ರಜಾಪ್ರಭುತ್ವದ ನೆಲೆಯಲ್ಲಿ ಸಮಾನತೆಗೆ ಗೌರವ ನೀಡಿದ ಕವಿ ಶ್ರೀ ಎಂ. ಗೋಪಾಲಕೃಷ್ಣ ಅಡಿಗರು. ನವೋದಯ ಮಾರ್ಗದಲ್ಲಿ ತಮ್ಮ ಕಾವ್ಯರಚನೆಯನ್ನು ಪ್ರಾರಂಭಿಸಿ ಅದರ ಅಡಿಗಲ್ಲಿನ ಮೇಲೆ ನವ್ಯಮಾರ್ಗದ ಸ್ಥಾಪನೆಯ ಪ್ರವರ್ತಕರೆಂದು ಪ್ರಸಿದ್ಧರಾದ ಶಿಕ್ಷಕ, ಕವಿ, ಪ್ರಬಂಧಕಾರ ಮತ್ತು ವಿಮರ್ಶಕ. ಶ್ರೀ ಎಂ. ಗೋಪಾಲಕೃಷ್ಣ ಅಡಿಗರು 18.02.1918ರಂದು ದಕ್ಷಿಣ ಕನ್ನಡ ಜಿಲ್ಲೆಯ ಉತ್ತರದ ಕೊನೆಯಲ್ಲಿರುವ ಮೊಗೇರಿ ಎಂಬ ಹಳ್ಳಿಯಲ್ಲಿ ಜನಿಸಿದರು.

ಪುರೋಹಿತ ಮನೆತನಕ್ಕೆ ಸೇರಿದ ಅಡಿಗರ ತಂದೆ ರಾಮಪ್ಪನವರು ಸಂಸ್ಕೃತದಲ್ಲಿ ಶ್ಲೋಕಗಳನ್ನೂ, ಕನ್ನಡದಲ್ಲಿ ದೇಶಭಕ್ತಿ ಗೀತೆಗಳನ್ನೂ ರಚಿಸುತ್ತಿದ್ದರಂತೆ. ಅವರ ಹತ್ತಿರದ ಬಂಧುಗಳೊಬ್ಬರು ಅವರ ಮನೆಯಲ್ಲಿ ಯಕ್ಷಗಾನ ಪ್ರಸಂಗ ಬರೆದರೆ, ಸೋದರತ್ತೆ ನಾರಣಪ್ಪನ ಭಾರತ, ತೊರವೆ ರಾಮಾಯಣ, ಜೈಮಿನಿ ಭಾರತ, ಇವುಗಳನ್ನು ರಾಗವಾಗಿ ಓದಿ ಹೇಳುತ್ತಿದ್ದರೆಂದು ಅಡಿಗರು ನೆನಪಿಸಿಕೊಳ್ಳುತ್ತಾರೆ.

ಅಡಿಗರು ತಮ್ಮ ವಿದ್ಯಾಭ್ಯಾಸವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಗಿಸಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. (ಆನರ್ಸ್) ಎಂ.ಎ. ಪದವಿಯನ್ನು ಇಂಗ್ಲಿಷ್ ಭಾಷೆಯಲ್ಲಿ ಪಡೆದರು. ಅಡಿಗರು ಪ್ರೌಢಶಾಲೆಯ ಶಿಕ್ಷಕರಾಗಿ ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಮತ್ತು ತುಮಕೂರಿನಲ್ಲಿ ಸೇವೆಸಲ್ಲಿಸಿದರು. ಮುಂದೆ ಮೈಸೂರಿನ ಶಾರದಾ ವಿಲಾಸ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಕುಮುಟಾದ ಕೆನರಾ ಕಾಲೇಜು, ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜುಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1965–68ರಲ್ಲಿ ಸಾಗರದ ಲಾಲ್ ಬಹದ್ದೂರ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅನಂತರ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ನ್ಯಾಷನಲ್ ಬುಕ್ ಟ್ರಸ್ಟ್ ದೆಹಲಿಯ ಡೆಪ್ಯೂಟಿ ಡೈರೆಕ್ಟರ್ ಮತ್ತು ಸಂಪಾದಕರಾಗಿ 6 ತಿಂಗಳು ಸೇವೆ ಸಲ್ಲಿಸಿದ್ದಾರೆ. ಮೂರು ವರುಷ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಸಿಮ್ಲಾನಲ್ಲಿ 1972ರಿಂದ 1975ರ ವರೆಗೆ ವಿಸಿಟಿಂಗ್ ಫೆಲೋ ಆಗಿ ಸೇವೆ ಸಲ್ಲಿಸಿ, 1975ರಿಂದ 1992ರ ವರೆಗೆ ಬೆಂಗಳೂರಿನಲ್ಲಿ ನಿವೃತ್ತ ಜೀವನ ಕಳೆದರು.

ಇವರು 1971ರಲ್ಲಿ ಜನಸಂಘದ ಪರವಾಗಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಮತ್ತೆ 1985ರಲ್ಲಿ ವಿಧಾನಸಭೆಗೆ ಸ್ಪರ್ಧಿಸಿದ್ದರು. 1974 ಮತ್ತು 1986ರಲ್ಲಿ ಅಮೇರಿಕಾ ಪ್ರವಾಸ ಮಾಡಿದರು.

ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ರಾಜಕೀಯ ಹೀಗೆ ವಿವಿಧ ವಿಷಯಗಳ ಬಗ್ಗೆ ಅಡಿಗರು ಅನೇಕ ಲೇಖನಗಳನ್ನು ಬರೆದಿದ್ದಾರೆ. ಅವರ ಈ ಎಲ್ಲ ವೈಚಾರಿಕ ಲೇಖನಗಳು ಸಮಗ್ರ ಗದ್ಯ ಎಂಬ ಸಂಪುಟವೊಂದರಲ್ಲಿ ಪ್ರಕಟವಾಗಿದೆ.

ಅವರ ಗದ್ಯ ಬರಹಗಳನ್ನು ಕುರಿತು ಅವರೇ ಹೇಳುವ ರೀತಿ:

'ವಿಚಾರ ಪ್ರಧಾನವಾದ ಈ ಪ್ರಬಂಧಗಳಲ್ಲಿ ನಾನು ನನ್ನ ಕಾವ್ಯಗಳಲ್ಲಿ ಹೇಳದೆ ಇರುವುದು ಯಾವುದೂ ವ್ಯಕ್ತಗೊಂಡಿಲ್ಲ. ಅಲ್ಲಿ ಅನುಭವ ಚಿತ್ರಗಳಾಗಿ ವ್ಯಕ್ತಗೊಂಡ ವಿಚಾರಗಳು, ಕಲ್ಪನೆಗಳು, ಇಲ್ಲಿ ಪ್ರಜ್ಞೆಯ ಸ್ತರದಲ್ಲಿ ಶುದ್ಧ ಗದ್ಯದಲ್ಲಿ ಸ್ಪಷ್ಟತೆ, ಸ್ಫುಟತೆ, ಅಸಂದಿಗ್ಧತೆಗಳನ್ನೇ ಗುರಿಯಾಗಿಟ್ಟುಕೊಂಡು ಪ್ರಕಟವಾಗಿದೆ.' ಅಡಿಗರು ಕೆಲವು ಸಣ್ಣ ಕಥೆಗಳನ್ನು ಬರೆದಿದ್ದಾರೆ.

ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯರವರ ಮೂಲಕ ಅಡಿಗರ ಕಾವ್ಯಧಾರೆ ಅರಿಯಲು ಪ್ರಯತ್ನಿಸೋಣ.

1926ರ ವೇಳೆಗೆ ಬಿ.ಎಂ.ಶ್ರೀ. ಅವರು ತೋರಿಸಿಕೊಟ್ಟ ಮಾರ್ಗದಲ್ಲಿ ಮುನ್ನಡೆದ ಕನ್ನಡ ಕಾವ್ಯ ಒಂದು ಸ್ಪಷ್ಟರೂಪ ಪಡೆದು ಮಹತ್ವದ ಸಂಕಲನಗಳು ಆ ವೇಳೆಗಾಗಲೇ ಪ್ರಕಟವಾಗಿದ್ದವು. ಹೊಸದಾಗಿ ಬರೆಯಲು ಆರಂಭಿಸುವ ತರುಣರಿಗೆ ಒಂದು ಕಾವ್ಯ ಮಾದರಿ ಕಣ್ಣೆದುರಿಗಿತ್ತು. ಈ ಮಾದರಿಯನ್ನು ಬಿಟ್ಟು ಹೊಸದಾರಿ ಕಂಡುಕೊಳ್ಳುವುದು,

ತನ್ನತನವನ್ನು ರೂಪಿಸಿಕೊಳ್ಳುವುದು. ಅಡಿಗರು ಕಾವ್ಯರಚನೆಯ ಆರಂಭದಲ್ಲಿ ಎದುರಿಸಿದ ಬಹುಮುಖ್ಯ ಸಮಸ್ಯೆಯಾಗಿದ್ದಂತೆ ತೋರುತ್ತದೆ.

ಅನ್ಯರೊರೆದುದನೆ, ಬರೆದುದನೆ, ನಾ ಬರೆಬರೆದು,
ಭಿನ್ನವಾಗಿದೆ ಮನವು
ಬಗೆಯೊಳಗನೇ ತೆರೆದು, ನನ್ನ ನುಡಿಯೊಳೆ, ಬಣ್ಣ ಬಣ್ಣದಲಿ,
ಬಣ್ಣಿಸುವ ಪನ್ನತಿಕೆ ಬರುವತನಕ,
ನನ್ನ ಬಾಳಿದು ನರಕ

ಅಡಿಗರ ಆರಂಭದ ಕವಿತೆಗಳ ಮುಖ್ಯಗುಣ–ಭಾವತೀವ್ರತೆ. ಭಾವತರಂಗದ ಹೆಸರೇ ಸೂಚಿಸುವಂತೆ ಅಡಿಗರ ಕಾವ್ಯ ಇಲ್ಲಿ ಭಾವದ ಅಲೆಯ ಮೇಲೆ ನಿರಾಯಾಸವಾಗಿ ತೇಲಿದೆ.

ವಿಧಿಯೇ ನಿನ್ನಿದಿರು ಮಾರಾಂತು ಹೋರಾಡಿ
ಕೆಚ್ಚೆದೆತನದ ಬಲ್ಮೆಯನ್ನು ಬಿತ್ತರಿಪೆನು
ಪದವನಿಡುತೆನ್ನೆದೆಯ ಮೇಲೆ ತಾಂಡವವೆಸಗು
ಬೆದರುವೆನೆ ಬೆಚ್ಚುವೆನೆ ನಿನಗೆ ನಾನು

ಅವರ 'ಹೊಸಹಾದಿ' ಕವನದಲ್ಲಿ ಹೀಗೆ ಹೇಳಿದ್ದಾರೆ:

ಹೊಸಹಾದಿಯನು ಹಿಡಿದು ನಡೆಯಣ್ಣ ಮುಂದೆ
ಹೊಸ ಜೀವ ಹೊಸ ಭಾವ ಹೊಸ ವೇಗದಿಂದೆ
ಅಂಜದಿರು ಗೆಳೆಯ ಹೊಸಹಾದಿಯನು ಹಿಡಿಯೆ

ಇಲ್ಲಿ ಅತ್ಯುತ್ಸಾಹವು ತಲ್ಲಣದ ದನಿಯಾಗುತ್ತದೆ. ಆವೇಶ ಹದಗೊಂಡು ನೋವು ಮನಸ್ಸನ್ನು ಆಕ್ರಮಿಸುತ್ತದೆ, ತನ್ನ ನೆಲೆಯನ್ನು ಹುಡುಕಿಕೊಳ್ಳುವ ತವಕದಲ್ಲಿ ಕವಿ ಮನಸ್ಸು ಅಸ್ವಸ್ಥಗೊಳ್ಳುತ್ತದೆ. ಪ್ರೀತಿಯ ವಂಚಿತವಾದಂತೆ ಕಾಣುತ್ತದೆ.

'ಗಾಳಿಯೊಡನೆ' ಕವನದಲ್ಲಿ;

ಕಂಡು ಮಾತನಾಡಿ ಮೈ
ದಡವಿ ನಗಿಸಿ ನಲಿವರಿಲ್ಲ
ಬೆಂದ ಬಗೆಗೆ ಸೊದೆಯನೆರೆದು
ಕಂಬನಿಯ ತೊಡೆವರಿಲ್ಲ

'ಕಲ್ಲಾಗು ಕಲ್ಲಾಗು' ಕವನದಲ್ಲಿ ಅಡಿಗರು;

ಕಲ್ಲಾಗು ಕಲ್ಲಾಗು ಬಾಳ ಬಿರುಗಾಳಿಯಲಿ
ಅಲ್ಲಾಡದೆಯೆ ನಿಲ್ಲು ನಿಲ್ಲು ಜೀವ

ಎಂದು ಕಷ್ಟಗಳು ಎದುರಾದಾಗ ಪ್ರೀತಿ ವಂಚಿತವಾದಾಗ ಬಾಳಲ್ಲಿ ಕಲ್ಲಾಗುವ ಅವಶ್ಯಕತೆಯಿದೆ ಎಂದು ತಿಳಿಸುತ್ತಾರೆ.

'ನನ್ನ ಅವತಾರ' ಕವಿತೆಯಲ್ಲಿ ಮಹಾತ್ಮರು ಜೀವನ ಸಾಗಿಸುತ್ತ ಸಾಧಿಸುತ್ತಾರೆ. ನಾವೇಕೆ ಆ ಸಾಧನೆಗಳನ್ನು ಮಾಡುವುದಿಲ್ಲ ಎಂದು ಪ್ರಶ್ನಿಸಿಕೊಳ್ಳುತ್ತಾರೆ.

ನಾನು ಅವನು ಒಂದೆ ಲೋಹ
ಕಬ್ಬಿಣ–ಕರಿ ಕಬ್ಬಿಣ
ಯಾವ ರಸವು ಸೋಂಕಿತವನ
ಯಾವ ಬೆಂಕಿ ತಾಕಿತವನ
ಸಾಯುವಾಗ ಎಂಥ ಗಟ್ಟಿ ಚಿನ್ನವಾಗಿ ಸಾಗಿದ
ನಾನು ಮಾತ್ರ ಆಗ ಹೇಗೋ ಹಾಗೆಯೇ ಈಗಲೂ

ಅಡಿಗರ ಗದ್ಯ

ಗೋಪಾಲಕೃಷ್ಣ ಅಡಿಗರ ಕವನಗಳು ಎಷ್ಟು ಪ್ರಸಿದ್ಧವೋ ಹಾಗೇ ಅವರ ಕಾದಂಬರಿಗಳೂ ಪ್ರಸಿದ್ಧವಾಗಿದೆ. ಸುಮಾರು 1950ರಲ್ಲಿ ಸಮಾಜದ ಸಹಜ ಸ್ಥಿತಿಗಳನ್ನು ಹೊರತರಲು,

ಚರ್ಚಿಸಲು, ಬದಲಾವಣೆಯ ಬವಣೆಗಳನ್ನು ತೋರಿಸಲು ಕಾದಂಬರಿ ಪ್ರಮುಖವಾಯಿತು. ಶಿವರಾಮ ಕಾರಂತರ, ಅ.ನ. ಕೃ.ರವರ, ತ್ರಿವೇಣಿಯವರ ಕಾದಂಬರಿಗಳಂತೆಯೇ ಅಡಿಗರ ಕಾದಂಬರಿಗಳೂ ಸಾಮಾಜಿಕ ಜೀವನದ ಪ್ರತಿಬಿಂಬವಾಗಿದೆ. ಕಾದಂಬರಿಗಳಲ್ಲದೆ ಸಮಗ್ರ ಗದ್ಯ ಮತ್ತು ಸಾಕ್ಷಿಪ್ರಜ್ಞೆ ಅವರ ಗದ್ಯದ ಸಂಗ್ರಹವಾಗಿದೆ. ಅಡಿಗರ ಲೇಖನಗಳಲ್ಲಿ 119 ಲೇಖನಗಳು ಸಾಕ್ಷಿಪ್ರಜ್ಞೆಯಲ್ಲಿದೆ.

ಅಡಿಗರ 'ಹುಲಿರಾಯ ಮತ್ತು ಇತರ ಕಥೆಗಳು' 1990ರಲ್ಲಿ ಪ್ರಕಟವಾದವು. ಇವು ಅಡಿಗರ ಅನೇಕ ವರುಷಗಳ ಕಥೆಗಳ ಸಂಗ್ರಹ.

ಇವರ 'ಆಕಾಶದೀಪ' ಮತ್ತು 'ಅನಾಥೆ' ಪ್ರಸಿದ್ಧ ಕಾದಂಬರಿ ಗಳು. ನರೇಂದ್ರ ಪೈಯವರ ದೃಷ್ಟಿಕೋನದೊಂದಿಗೆ ಅವರ ಲೇಖನದ ಮೂಲಕ ಈ ಎರಡು ಕಾದಂಬರಿಯ ಬಗ್ಗೆ ದೃಷ್ಟಿ ಹರಿಸೋಣ.

'ಆಕಾಶದೀಪ' ಕಾದಂಬರಿಯಲ್ಲಿ ಪ್ರೀತಿಯ, ಸ್ನೇಹದ ನಿರಂತರವೂ, ನಿಷ್ಫಲವೂ ಆದ ಹುಡುಕಾಟ ಮತ್ತು ಆ ನೋವೇ ಮೂಲವಾಗಿ ಹುಟ್ಟುವ ಒಂದು ಹೊಸ ಅರಿವು, ಮಾಧವ ತನ್ನ ಆತ್ಮೀಯನಾದ ಕೃಷ್ಣನನ್ನು ಕಳೆದುಕೊಳ್ಳುತ್ತಾನೆ, ತನ್ನಲ್ಲಿ ಪ್ರೀತಿಯ ಕಲ್ಪನೆಯನ್ನು ಮೂಡಿಸಿದ ನೀಲಳನ್ನು ಕಳೆದುಕೊಳ್ಳುತ್ತಾನೆ. ಈ ಅಗಲುವಿಕೆ, ನೋವು, ನೊಂದವನ ಬದುಕನ್ನು ನಾಶಮಾಡದೆ, ಒಳಿತಿಗೆ, ಬೆಳವಣಿಗೆಗೆ ನಾಂದಿಯಾಗುತ್ತದೆ.

'ಅನಾಥೆ' ಕಾದಂಬರಿಯಲ್ಲಿ ವಿವಾಹಿತ ಸ್ತ್ರೀ ಮತ್ತು ಒಬ್ಬ ಅವಿವಾಹಿತ ಯುವಕನ ನಡುವೆ ಇರುವ, ಇರದಿರುವ, ಅನಿಸಿಕೆಗಳಲ್ಲಿಯೇ ಆಸೆಗಳಲ್ಲಿಯೇ ಉಳಿದು ಬಿಡುವ ಭಾವನೆಗಳ ತೊಳಲಾಟಗಳಿವೆ. ಗರ್ಭಿಣಿ ಒಬ್ಬೊಂಟಿಗಳಾಗಿ

ರಸ್ತೆಯಲ್ಲಿ ಅಸಹಾಯಕಳಾಗಿರುವಾಗ ಅರ್ಚಕ ಶೀನಪ್ಪ ಆಶ್ರಯ ಕೊಡುವುದು ಊರಿನವರಿಗೆ ಹೊಸ ವಿಷಯವಾಗುತ್ತದೆ. ಅವರು ಒಂದೇ ಸೂರಿನಲ್ಲಿರುವುದರಿಂದ, ಅವರು ಸಂಶಯಿಸಿ ಬಹಿಷ್ಕರಿಸುತ್ತಾರೆ. ಅವಿವಾಹಿತ ಶೀನಪ್ಪನ ಸಂಯಮ ಪದ್ಮಾವತಿಗೆ ಅವನನ್ನು ದೇವರ ಸ್ಥಾನಕ್ಕೆ ಏರಿಸುವಂತಾಗುತ್ತದೆ. ಊರಿನವರಿಗೆ ದೇವರ ಪೂಜೆ ಮಾಡಲೂ ತಪ್ಪೆನಿಸುತ್ತದೆ. ಅವನ ಯೌವನ ಅವನ ಯೋಚನೆಗಳ ಬದಲಾವಣೆಗೆ ಬೇರೆ ದಾರಿ ತೋರುತ್ತದೆ. ಅವನ ದೇಹದ ಆಸೆಗಳು ಅವಳ ಮೇಲೆ ಮನಸ್ಸು ಬರುವಂತೆ ಬದಲಾವಣೆಯಾಗುತ್ತದೆ. ಅವಳ ಗಂಡ ರಾಮಚಂದ್ರ ಶಾಸ್ತ್ರಿ ಸಾಲದ ತೊಂದರೆಯಿಂದ ಓಡಿಹೋಗಿರುತ್ತಾನೆ, ಮುಂದೆ ಆತ ಪದ್ಮಾವತಿಯನ್ನು ಹುಡುಕಲು ಪ್ರಯತ್ನಮಾಡಿ ವಿಫಲನಾಗಿ ಒದ್ದಾಡುತ್ತಿರುತ್ತಾನೆ. ಆಗ ಮತ್ತೊಂದು ಮದುವೆಯನ್ನು ಆಗಿಬಿಡುತ್ತಾನೆ. ಈ ಸಾಂಸಾರಿಕ ಜಂಜಾಟ, ಪಲಾಯನ, ಪರಸ್ತ್ರೀಯ ಮೇಲೆ ಮೋಹ, ಅಸಹಾಯಕತೆ, ತಿರಸ್ಕಾರ, ದ್ವಂದ್ವ ಎಲ್ಲಾ ಚಿತ್ರಣಗಳೂ ಕಾದಂಬರಿಯಲ್ಲಿ ಮೂಡಿ ಬಂದಿದೆ. ಇಲ್ಲಿ ಕ್ರಾಂತಿಯಿದೆಯೋ ಹೊಸ ಯೋಚನೆಯಿದೆಯೋ ಎಂದು ಕಾದಂಬರಿಯಲ್ಲಿ ಓದುಗನ ಆಸಕ್ತಿ ಹೆಚ್ಚುತ್ತದೆ.

ಗೋಪಾಲಕೃಷ್ಣ ಅಡಿಗರ ಕವಿತೆಗಳಲ್ಲಿ 'ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು' ಬಹಳ ಜನಪ್ರಿಯ ಗೀತೆ. ಈ ಗೀತೆಯನ್ನು ಜನಪ್ರಿಯ ಗಾಯಕರೆಲ್ಲರೂ ಹಾಡಿರಬಹುದು.

ಸುಮತೀಂದ್ರ ನಾಡಿಗರು ಈ ಕವನದ ಬಗ್ಗೆ ಉತ್ತಮ ವಿಮರ್ಶೆ ನೀಡಿದ್ದಾರೆ. ಈ ಕವನದಲ್ಲಿ ಅನುಭವದ, ಹುಡುಕಾಟದ ಕ್ರಮವನ್ನು ಅದರ ಆಕೃತಿಯಲ್ಲೇ ಪಡೆದಿರು

ವುದರಿಂದ ಒಮ್ಮೆಗೆ ಮನ ಮುಟ್ಟುತ್ತದೆ ಎಂದು ತಿಳಿಸುತ್ತಾರೆ. ತಾರ್ಕಿಕದಲ್ಲಿ ಮುಳುಗಿದವನನ್ನು ಅತಾರ್ಕಿಕವಾದ ಕರೆಯೊಂದು ಎಚ್ಚರಿಸುತ್ತದೆಂಬ ನಂಬಿಕೆಯ ಸುತ್ತ 'ಮೋಹನ ಮುರಲಿ' ರಚಿಸಲ್ಪಟ್ಟಿದೆ.

'ಯಾವ' ಎಂದು ಆರಂಭವಾಗುವ ಕವನದಲ್ಲಿ ಐದು ಬಾರಿ ಬರುವ ಪ್ರಶ್ನಾರ್ಥಕ ಪರತತ್ತ್ವದ ಗೂಢತೆಯನ್ನೂ, ಅದನ್ನು ತಿಳಿದುಕೊಳ್ಳಬೇಕೆನ್ನುವ ಕಾತರವನ್ನೂ, ಹುಡುಕಾಟವನ್ನೂ ಒಟ್ಟಿಗೆ ಹೇಳುತ್ತದೆ. ಮೋಹನ ಮುರಲಿ ಮತ್ತು ಬೃಂದಾವನ ಎನ್ನುವ ಸಾಂಪ್ರದಾಯಿಕ ಭಾವಸಾಹಚರ್ಯದಿಂದ ಕೃಷ್ಣನ ಭಕ್ತಿ ಪ್ರಿಯತೆಯನ್ನು ಧ್ವನಿಸುತ್ತದೆ. ಈ ಕರೆಗೆ ಎಚ್ಚೆತ್ತ ಜೀವಿಯಲ್ಲಿ ಇಹದ ಬಗ್ಗೆ ಬೇಸರ, ಪರದ ಬಗ್ಗೆ ತೀವ್ರವಾದ ಆಸಕ್ತಿ, ಅನುಭಾವದಲ್ಲಾಗುವ ಪರವಶತೆ ಕಾಣಿಸಿಕೊಳ್ಳುತ್ತವೆ. ಈ ಕವಿತೆ ಸುಮತೀಂದ್ರ ನಾಡಿಗರ ಪ್ರಕಾರ ಭಾವಗೀತೆ ಸೀಮೆಯಲ್ಲೇ ಅದ್ಭುತ ಸಂಕೀರ್ಣತೆಯನ್ನು ಸಾಧಿಸಿದೆ. ಅರ್ಥದ ಮಜಲಿನಲ್ಲಿ ಕಾಣಿಸುವ ಸಂಕೀರ್ಣತೆ ವಿಶಿಷ್ಟ ಗೀತೆಯನ್ನು ಸೃಷ್ಟಿಸುವ ರಚನೆಯಲ್ಲಿ ಕಂಡು ಬರುತ್ತದೆ.

ವಿವಶವಾಯಿತು ಪ್ರಾಣ ಹಾ ಪರವಶವು ಎನ್ನೀ ಚೇತನ
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ

ಊಟದ ಸಮಯದಲ್ಲಿ ಪ್ರಾಣಾಯಸ್ವಾಹಾ, ಅಪಾನಾಯಸ್ವಾಹಾ, ವ್ಯಾನಾಯಸ್ವಾಹಾ, ಉದಾನಾಯಸ್ವಾಹಾ, ಸಮಾನಾಯಸ್ವಾಹಾ ಎಂದು ಮಂತ್ರ ಹೇಳುವುದುಂಟು.

'ವಿವಶವಾಯಿತು ಪ್ರಾಣ ಹಾ ಪರವಶವು ಎನ್ನೀ ಚೇತನ' – ಇದು ಪ್ರಾಣ ದೇಹದ ಸ್ವಾಧೀನ ತಪ್ಪಿದ ಮೇಲೆ ಪರವಶವಾಗುತ್ತದೆ. ಜೀವ, ದೇಹದ ಸಂಪರ್ಕದ, ಅರ್ಥದ ಚೇತನ, ಪಾರಮಾರ್ಥದ ಹಿನ್ನೆಲೆ ಕಾಣುತ್ತದೆ.

'ಇರುವುದೆಲ್ಲವ ಬಿಟ್ಟು ಇರುದುದರೆಡೆಗೆ ತುಡಿವುದೇ ಜೀವನ'? – ನಾನು ಅನೇಕ ವರುಷಗಳು ಈ ಒಂದು ಸಾಲಿನ ಸಂಪೂರ್ಣ ಅರ್ಥ ಹುಡುಕಲು ವ್ಯರ್ಥಪ್ರಯತ್ನ ಮಾಡಿದ್ದೇನೆ. ನಮಗೆ ಜೀವನದಲ್ಲಿ ಏನು ದೊರೆತಿದೆ ಅದನ್ನು ಅನುಭವಿಸಿ ಸಂತಸದಾಯಕವಾಗಿದ್ದು ಸಮಾಜದ ಭಾಗಿಯಾಗುವುದು ಸಹಜಕ್ರಿಯೆ. ಆದರೆ ನಾವು ನಮಗೆ ದೊರೆತ ಎಲ್ಲವ ಮರೆತು ಇಲ್ಲದಿರುವ, ಪಡೆಯದಿರುವ ಸಾಧಿಸದಿರುವ ವಸ್ತು, ವಿಚಾರ, ಬುದ್ಧಿವಂತಿಕೆ, ವಿಷಯಾಸಕ್ತಿಯಲ್ಲಿ ಆಸಕ್ತಿ ತೋರಿ ತುಡಿಯುವುದು ಸ್ವಾಭಾವಿಕ. ಅದರಿಂದ ನಾವು ಅನೇಕವೇಳೆ ಸಂತಸಪಡುವ ಬದಲು ಪ್ರಯತ್ನಗಳಲ್ಲೇ ಸೋಲುಗಳಲ್ಲೇ ಜೀವನ ಕಳೆದು ಬಿಡುತ್ತೇವೆ. ಕನ್ನಡ ಸಾಹಿತ್ಯದಲ್ಲಿ ಈ ಎರಡು ಸಾಲುಗಳು ಎಷ್ಟು ಸಾಲುಗಳ ವಿಮರ್ಶೆಯನ್ನು ಬೇಕಾದರೂ ಸೃಷ್ಟಿಸುವ ಪ್ರಯತ್ನಕ್ಕೆ ನಾಂದಿ ಹಾಡಿದೆ.

ನನ್ನ ಚಿಕ್ಕಮ್ಮ ಗೀತಾ, ದೇವರ ವಿಚಾರ ಬಹಳವಾಗಿ ತಿಳಿದುಕೊಂಡಿದ್ದರು. ಅವರಿಗೆ ಸರಿಯಾಗಿ ಕಿವಿ ಕೇಳುತ್ತಿರಲಿಲ್ಲ. ಅವರಾಡಿದ ಮಾತು ಅನೇಕರಿಗೆ ಅರ್ಥವಾಗುತ್ತಿರಲಿಲ್ಲ. ನಮ್ಮ ತುಟಿಗಳ ಚಲನೆಯ ಮೂಲಕ ಅನೇಕ ವೇಳೆ ನಮ್ಮ ಮಾತು ಅರ್ಥಮಾಡಿಕೊಳ್ಳುತ್ತಿದ್ದರು. ಅವರಿಗೆ ಮದುವೆಯಾಗಿರಲಿಲ್ಲ, ಅನೇಕ ಕಡೆ ಅವರಿಗೆ ಉಂಟಾದ ಅವಮಾನ ಪ್ರಸಂಗಗಳನ್ನು ನಾನು ಕಂಡಿದ್ದೇನೆ.

ಅವರ ಜೀವನದ ಸಾರ್ಥಕತೆಯ ಅರ್ಥ ಏನು? ಈ ಪ್ರಶ್ನೆಗೆ ನನಗೆ ಉತ್ತರ ದೊರಕಿಲ್ಲ. ಅಂತಿರುವಾಗ ನಾವು ಸಾಧನೆಯ ಮತ್ತು ಗೆಲುವಿನ ಹಿಂದೆ ಏಕೆ ಅಷ್ಟಾಗಿ ಸಾಗುತ್ತೇವೆ ನನಗೆ ತಿಳಿದಿಲ್ಲ. ಅಡಿಗರ ಇರದುದರೆಡೆಗೆ ನಮ್ಮ ತುಡಿತ ಸರಿಯೇ ತಿಳಿಯುವುದು ಅರ್ಥವಾಗದ ವ್ಯರ್ಥಪ್ರಯತ್ನ.

ಗೋಪಾಲಕೃಷ್ಣ ಅಡಿಗರ ಮತ್ತೊಂದು ಜನಪ್ರಿಯ ಕವನ 'ನಾವೆಲ್ಲರೂ ಒಂದೆ ಜಾತಿ.'

ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ಒಂದೆ ಕುಲ
ನಾವು ಮನುಜರು
ನರರ ನಡುವಿನಡ್ಡ ಗೋಡೆಗಳನು ಕುಟ್ಟಿಕೆಡಹುವೆವು
ನಾವು ವಿಲಯರುದ್ರರು
ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು
ನಾವು ನವವಿಧಾತರು.
ತೆರೆಬಾಗಿಲು ಹೊರನೋಟದ ಹೊರೆಹಸುರಿನ ಹರಿದರ
ನಮ್ಮ ಹೃದಯ ಮಂದಿರ
ಅಲ್ಲಿ ಎಲ್ಲ ಜನಕು ಇದೆ ಸ್ವಾಗತವು ನಿರಂತರ
ಚಿರ ಉದಾರ ಸುಂದರ.

ಸಮಾನತೆಯ ಒಂದುಗೂಡಬೇಕಾದ 'ಸಮಾಜ ಸೃಷ್ಟಿಯ ಧ್ಯೇಯ'ದ ಕವನವಿದು.

ಅಡಿಗರ ನಡೆದು ಬಂದ ದಾರಿ, ಅತಿಥಿಗಳು, ಗೊಂದಲಪುರ, ಭೂಮಿಗೀತೆ, ನನಗೆ ಪ್ರಿಯವಾದ ಕವನಗಳು.

ಗೋಪಾಲಕೃಷ್ಣ ಅಡಿಗರ ಕೃತಿಗಳನ್ನು ಪಟ್ಟಿ ಮಾಡಿದಾಗ, ಕವನಗಳು ಮಾತ್ರ ಮುಖ್ಯವಾಗುವುದಿಲ್ಲ.

ಸಮಗ್ರ ಗದ್ಯ 132 ಬರಹಗಳಿವೆ. 119 ಲೇಖನಗಳು ಸಾಕ್ಷಿಪ್ರಜ್ಞೆಯಲ್ಲಿ ಅಡಕವಾಗಿದೆ.

- **ಅವರ ಅನುವಾದ ಸಾಹಿತ್ಯ:**

ಸುವರ್ಣ ಕೀರಿಟ
ರೈತರ ಹುಡುಗಿ
ಜನತೆಯ ಶತ್ರು

ಭೂಗರ್ಭ ಯಾತ್ರೆ
ಹುಲ್ಲಿನ ದಳಗಳು
ಮುಕ್ತಾಫಲ
ಇತಿಹಾಸಚಕ್ರ
ಬನದ ಮಕ್ಕಳು
ಟೈಪಿೀ
ನಾಲ್ಕು ಮಂದಿ ಗೆಳೆಯರ ಕಥೆ
ಕೆಂಪು ಅಕ್ಷರ
ಕಾವ್ಯ ಜಗತ್ತು
ಆಯ್ದ ಪ್ರಬಂಧಗಳು–1
ಆಯ್ದ ಪ್ರಬಂಧಗಳು–2
ಕೆಸರಿನಿಂದ ಶಿಖರಕ್ಕೆ

- **ಅಡಿಗರ ಆತ್ಮಕಥನ:**

ನೆನಪಿನ ಗಣಿಯಿಂದ

- **ಅಡಿಗರ ಸಮ್ಮಿಶ್ರ:**

ಆರೂಡು

- **ಅಡಿಗರ ವಿಚಾರ–ವಿಮರ್ಶೆ:**

ಮಣ್ಣಿನ ವಾಸನೆ
ವಿಚಾರಪಥ
ಕಡದ ಅಭಿಮಾನ
ನಮ್ಮ ಶಿಕ್ಷಣ ಕ್ಷೇತ್ರ ಲೇಖನಗಳು ಮತ್ತು ಮುನ್ನುಡಿ

- **ಕಾದಂಬರಿಗಳು:**

ಆಕಾಶ ದೀಪ
ಅನಾಥೆ

- **ಕಾವ್ಯ:**

ಭಾವತರಂಗ
ಕಟ್ಟುವೆವು ನಾವು
ನಡೆದುಬಂದ ದಾರಿ
ಚಂಡೆ ಮದ್ದಳೆ
ಭೂಮಿಗೀತ
ವರ್ಧಮಾನ
ಇದನ್ನು ಬಯಸಿರಲಿಲ್ಲ
ಮೂಲಕ ಮಹಾಶಯರು
ಬತ್ತಲಾಗದ ಗಂಗೆ
ಚಿಂತಾಮಣಿಯಲ್ಲಿ ಕಂಡ ಮುಖ
ಸುವರ್ಣ ಪುತ್ಥಳಿ
ಬಾ ಇತ್ತ ಇತ್ತ

- **ಆಯ್ದ ಕವನ ಸಂಗ್ರಹಗಳು:**

ಅಡಿಗರ ಆಯ್ದ ಕವನಗಳು
ಆರೋಹಣ

- **ಸಮಗ್ರ ಕಾವ್ಯ:**

ಸಮಗ್ರ ಕಾವ್ಯ (ಸಾಕ್ಷಿ ಪ್ರಕಾಶನ)
ಸಮಗ್ರ ಕಾವ್ಯ (ಐಬಿಎಚ್ ಪ್ರಕಾಶನ)
ಸಮಗ್ರ ಕಾವ್ಯ (ಸಪ್ನ ಬುಕ್ ಹೌಸ್)

- **ಕಥಾ ಸಂಕಲನಗಳು**

ಹುಲಿರಾಯ ಮತ್ತು ಇತರ ಕಥೆಗಳು

ಗೋಪಾಲಕೃಷ್ಣ ಅಡಿಗರಿಗೆ ಸಂದ ಪ್ರಶಸ್ತಿಗಳು:

- 1941–ಒಳತೋಟಿ ಕವಿತೆಗೆ ಬಿ.ಎಂ.ಶ್ರೀ. ಸುವರ್ಣ ಪದಕ
- 1968–ಸಂವೇದನೆ ಗೌರವ ಗ್ರಂಥ ಅರ್ಪಣೆ
- 1974–ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ
- 1975–ವರ್ಧಮಾನ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- 1979–ಕುಮಾರನ್ ಆಸಾನ್ ಪ್ರಶಸ್ತಿ
- 1979–ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಧರ್ಮಸ್ಥಳ
- 1980–ವರ್ಧಮಾನ ಪ್ರಶಸ್ತಿ
- 1986–ಕಬೀರ ಸಮ್ಮಾನ್ ಪ್ರಶಸ್ತಿ
- 1993–ಪಂಪ ಪ್ರಶಸ್ತಿ
- 1997–ಅನನ್ಯ ಗೌರವ ಗ್ರಂಥ – ಮರಣೋತ್ತರ


1986ರಲ್ಲಿ ಅಡಿಗರು ಅನಾರೋಗ್ಯಕ್ಕೆ ತುತ್ತಾದರು. 04.11.1992ರಲ್ಲಿ ಅವರು ನಮ್ಮನ್ನಗಲಿದರು.

ಅಡಿಗರು ಸಾಮಾನ್ಯ ಓದುಗನನ್ನು ಆಕರ್ಷಿಸಲು, ಜನತೆಗೆ ಇಷ್ಟವಾಗುವ ವಿಚಾರ ತಿಳಿಸಲು ಪ್ರಯತ್ನಿಸಲಿಲ್ಲ. ಜನರನ್ನು ಯೋಚಿಸು ವಂತೆ ಮಾಡುವ, ವಿಭಿನ್ನತೆಗೆ ಎಳೆಯುವ, ವಿಚಾರಧಾರೆಗೆ ಮನ್ನಣೆ ನೀಡುವ ಕಾವ್ಯ, ಕಥಾ ಸಂಕಲನ, ಕಾದಂಬರಿ, ವಿಚಾರ-ವಿಮರ್ಶೆ, ಗದ್ಯ, ಅನುವಾದಿತ ಸಾಹಿತ್ಯ, ಆತ್ಮ ಕಥನ, ಕಾದಂಬರಿಗಳು ಸಮಾಜಕ್ಕೆ ಉಪಯೋಗವಾಗಲು, ಹತ್ತಿರವಾಗಲು, ಪ್ರಬಲ ಮಾನದಂಡಗಳಾಗಿವೆ.

ಅಡಿಗರ ಕುರಿತು ವಿಮರ್ಶಾ ಗ್ರಂಥಗಳು, ಅಡಿಗರ ಸಾಹಿತ್ಯದ ಬಗೆಗಿನ ಲೇಖನಗಳು ಅಸಂಖ್ಯಾತವಾಗಿವೆ. ಇದು ಅವರ ಕಾವ್ಯ ಸೃಷ್ಟಿ, ದೃಷ್ಟಿ ಛಾಪು ಕನ್ನಡ ಸಾಹಿತ್ಯದಲ್ಲಿ ಪಸರಿಸಿದೆ ಎಂಬುದನ್ನು ತಿಳಿಸುತ್ತದೆ.

ಅಡಿಗರು ಸೃಜನಶೀಲ ಸಾಹಿತಿಗಳಲ್ಲೊಬ್ಬರು.

4



ಟಿ.ವಿ. ವೆಂಕಟಾಚಲ ಶಾಸ್ತ್ರೀ

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

[illegible]

[illegible]

[illegible]

ಸುಖಲಾಲಸೆಗಳ ಜಿಜ್ಞಾಸೆ, ಆತ್ಮನಿಗ್ರಹ, ಧರ್ಮಸಾಮರಸ್ಯವನ್ನು ಅವಿಸ್ಮರಣೀಯವಾಗಿ ದಾಖಲಿಸಿದ್ದಾರೆ.

ಶಾಸ್ತ್ರೀಗಳ ಕನ್ನಡ ವಿದ್ವತ್ತಿನ ವೈಶಿಷ್ಟ್ಯವೆಂದರೆ, ಪರಸ್ಪರ ಸಂಬಂಧಿಯಾದ ಅನೇಕ ವಿಷಯದಲ್ಲಿ ಅವರ ಪರಿಶ್ರಮ. ಒಂದು ವಿಚಾರ ಮಂಡನೆಯಲ್ಲಿ ವಿಷಯದ ಸೂಕ್ಷ್ಮತೆ ಮತ್ತು ಸಮಗ್ರತೆಯನ್ನು ಗ್ರಹಿಸಿ, ವಿಶ್ಲೇಷಿಸುವ ರೀತಿ.

ಟಿ.ವಿ. ವೆಂಕಟಾಚಲ ಶಾಸ್ತ್ರೀಗಳು 26.08.1933ರಲ್ಲಿ ಕನಕಪುರ ತಾಲ್ಲೂಕಿನ ಹಾರೋಹಳ್ಳಿಯಲ್ಲಿ ಜನಿಸಿದರು. ತಂದೆ ವೆಂಕಟಸುಬ್ಬಾಶಾಸ್ತ್ರಿಗಳು, ತಾಯಿ ಸುಬ್ಬಮ್ಮ. ಇವರ ವಿದ್ಯಾಭ್ಯಾಸ, ಹತ್ತನೇ ತರಗತಿಯವರೆಗೆ ಕನಕಪುರ, ಬಿ.ಎ. ಆನರ್ಸ್ ಮತ್ತು ಎಂ.ಎ. ಮೈಸೂರಿನ ಯುವರಾಜ ಮತ್ತು ಮಹಾರಾಜ ಕಾಲೇಜಿನಲ್ಲಿ. ಶಾಸ್ತ್ರೀಗಳ ಪಿಎಚ್.ಡಿ. ನಿಬಂಧ 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ.'

ಟಿ.ವಿ. ವೆಂಕಟಾಚಲ ಶಾಸ್ತ್ರೀಗಳ ಪೂರ್ಣನಾಮ ತೋಗೆರೆ ವೆಂಕಟಸುಬ್ಬಾಶಾಸ್ತ್ರಿ ವೆಂಕಟಾಚಲ ಶಾಸ್ತ್ರೀ. ಇವರ ವೃತ್ತಿ ಜೀವನ ಕನಕಪುರ ರೂರಲ್ ಕಾಲೇಜಿನಲ್ಲಿ 1955ರಲ್ಲಿ ಪ್ರಾರಂಭವಾಯಿತು. ನಂತರ ಬೆಂಗಳೂರು ಸೇಂಟ್ ಜೋಸೆಫ್ ಕಾಲೇಜು, ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯ ಮಹಿಳಾ ಕಾಲೇಜು, ನಂತರ ಮೈಸೂರು ವಿಶ್ವವಿದ್ಯಾಲಯದ ರೀಡರ್, ಪ್ರೊಫೆಸರ್ ಮತ್ತು ಸಂಸ್ಥೆಯ ನಿರ್ದೇಶಕ, ಕಲಾ ವಿಭಾಗದ ಡೀನ್ ಆಗಿ 1994 ಏಪ್ರಿಲ್ 13ರಂದು ನಿವೃತ್ತರಾದರು.

ವೆಂಕಟಾಚಲ ಶಾಸ್ತ್ರೀಗಳು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂದರ್ಶನ ಪ್ರಾಧ್ಯಾಪಕರಾಗಿ, ಮೈಸೂರು

ವಿಶ್ವವಿದ್ಯಾಲಯದ ಪ್ರಬುದ್ಧ ಕರ್ನಾಟಕ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿ, ಕನ್ನಡ ಸಾಹಿತ್ಯ ಚರಿತ್ರೆಯ ಸಂಪಾದಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಸಮಿತಿಯ ಸದಸ್ಯರಾಗಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕರ್ನಾಟಕ ಲೋಚನದ ಸಂಪಾದಕೀಯ ಸಮಿತಿಯ ಸದಸ್ಯರಾಗಿ, ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಅಧ್ಯಕ್ಷರಾಗಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಾಚೀನ ಸಾಹಿತ್ಯ ಮಾಲೆಯ ಸಲಹಾ ಸಮಿತಿಯ ಸದಸ್ಯರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸಾಮಾನ್ಯ ಸಭೆ ಮತ್ತು ಸಲಹಾ ಸಮಿತಿಯ ಸದಸ್ಯರಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಾಚೀನ ಭಾರತೀಯ ಸಾಹಿತ್ಯ ಸಂಕಲನ ಯೋಜನೆಯ ಕನ್ನಡ ಭಾಷಾ ಸಂಪಾದಕರಾಗಿ, ಕರ್ನಾಟಕ ಸರ್ಕಾರದ ಗೆಜೆಟಿಯರ್ ಇಲಾಖೆಯ ಸುವರ್ಣ ಲ್ಯಾಂಗ್ವೇಜ್ ಡೆವಲಪ್‌ಮೆಂಟ್ ಬೋರ್ಡಿನ ಸದಸ್ಯರಾಗಿ, ಸುವರ್ಣ ಕರ್ನಾಟಕ ಸಂಪುಟಗಳ ಪ್ರಕಟಣಾ ಯೋಜನೆಯ ಸದಸ್ಯರಾಗಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಜೈನ ಸಂಪುಟಗಳ ಯೋಜನೆಯ ಸಲಹಾ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಶಾಸ್ತ್ರೀಗಳ ಸಾಹಿತ್ಯ ಚರಿತ್ರೆಯ ಅಧ್ಯಯನ, ಬೇರೆಯವರ ಕೃತಿಗಳನ್ನು ಪರಿಷ್ಕರಿಸುವ ಬಗೆ ಮತ್ತು ವಿದ್ವತ್‌ಪೂರ್ಣ ಲೇಖನಗಳು ಅಭೂತಪೂರ್ವ. ಲಿಂಗಾಯಿತ ಸಾಹಿತ್ಯ, ಜೈನ ಸಾಹಿತ್ಯ, 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ' ಮತ್ತು 'ವಚನ ಸಾಹಿತ್ಯದ ಉಗಮ ಮತ್ತು ವಿಕಾಸ,' 'ಕೆಲವು ವಚನಕಾರರು' ಬಹು ಮುಖ್ಯವಾದ ಕೊಡುಗೆ. ಇವರ ಶೋಧನಾ ಲೇಖನಗಳು ಶಾಸ್ತ್ರಜ್ಞವಾಗಿ ತುಂಬಾ ಪ್ರಖ್ಯಾತಿ ತಂದುಕೊಟ್ಟಿದೆ.

ಶಾಸ್ತ್ರೀಗಳ 'ಕನ್ನಡ ಚಿತ್ರಕಾವ್ಯ' ಮತ್ತು 'ಮಹಾಕಾವ್ಯ ಲಕ್ಷಣ' ಮೌಲಿಕ ಕೃತಿಗಳು. ಕನ್ನಡ ಚಿತ್ರಕಾವ್ಯದಲ್ಲಿ ಕನ್ನಡ ಭಾಷೆಯಲ್ಲಿರುವ ಚಿತ್ರಕಾವ್ಯ ಸ್ವರೂಪ, ಇತಿಹಾಸ ಮತ್ತು ವಿಮರ್ಶೆಯನ್ನು ಸಂಸ್ಕೃತ ಭಾಷೆಯ ಚಿತ್ರಕಾವ್ಯದ ಸ್ವರೂಪ ಮತ್ತು ಪದ್ಧತಿಗಳ ಹಿನ್ನೆಲೆಯಲ್ಲಿ ನಿರೂಪಿಸುವ ಶ್ಲಾಘ್ಯ ಪ್ರಯತ್ನ ಮಾಡಿದ್ದಾರೆ. ಚಿತ್ರಕಾವ್ಯದಲ್ಲಿ ಗತಿಚಿತ್ರ, ಅನುಪ್ರಾಸ, ಯಮಕ, ವರ್ಣಚಿತ್ರ, ಶ್ಲೇಷಚಿತ್ರ, ಗಭಾಕವಿತ್ವ, ಪ್ರಹೇಳಿಕೆ, ಗೂಢಚಿತ್ರ, ಬಂಧ ಚಿತ್ರಗಳೆಂಬ ಅಧ್ಯಾಯಗಳಿವೆ. ಚಿತ್ರಕಾವ್ಯದ ಬಂಧ ಚಿತ್ರಗಳನ್ನು ಬರೆಸಿ ಪ್ರತ್ಯಕ್ಷೀಕರಿಸಿ, ವೈವಿಧ್ಯಗಳನ್ನು ವಿವರಿಸುತ್ತಾರೆ. 'ಮಹಾ ಕಾವ್ಯ ಲಕ್ಷಣ' ಗ್ರಂಥದಲ್ಲಿ ಅನೇಕ ಲಾಕ್ಷಣಿಕರ ಬರಹದ ಲಕ್ಷಣ ಭಾಗದ ಮೂಲಾಧಾರ, ವಿಚಾರ, ವಿಭಿನ್ನತೆ, ಜೊತೆಗೆ ತಮ್ಮ ತರ್ಕ ಸೇರಿಸಿ ವಿವರಿಸಿದ್ದಾರೆ.

'ಕನ್ನಡ ಛಂದಃ ಸ್ವರೂಪ' ಕೃತಿಯಲ್ಲಿ ವೆಂಕಟಾಚಲ ಶಾಸ್ತ್ರೀಗಳು ಛಂದಸ್ಸಿನ ಸಂಜ್ಞೆಗಳು, ವೈದಿಕ ಛಂದಸ್ಸು, ಲೌಕಿಕ ಛಂದಸ್ಸು, ಆರ್ಯೆ ಮತ್ತು ಅದರ ಪ್ರಭೇದಗಳು, ಸೀಸ, ಚೌಪದ, ರಗಳೆಗಳ ವಿಚಾರ, ಕನ್ನಡ ಮಟ್ಟುಗಳ ಪರಿಚಯ, ಛಂದಸ್ಸಿನ ನೆಲೆಗಟ್ಟು, ಬೇರುಗಳ ಪ್ರಕಾರ ಮತ್ತು ವಿಭಿನ್ನತೆಯ ಕುರಿತು ವಿವರ ನೀಡುತ್ತಾರೆ.

ಶಾಸ್ತ್ರೀಗಳು 'ಕನ್ನಡ ಛಂದೋಮೀಮಾಂಸೆ' ಕೃತಿಯಲ್ಲಿ ಶಬ್ದಗುಣಗಳು, ಶಬ್ದಚಿತ್ರಗಳು, ಅಕ್ಷರಾವೃತ್ತಿ, ವರ್ಣವೃತ್ತಗಳು ಮತ್ತು ಗಣ ವಿನ್ಯಾಸವನ್ನು ವಿವರಿಸಿದ್ದಾರೆ.

ಕನ್ನಡ ಪದರಚನೆ, ನಿಷ್ಪತ್ತಿ ಐತಿಹಾಸಿಕ ಬೆಳವಣಿಗೆಯ ವಿಚಾರ ಮನದಟ್ಟು ಮಾಡಿಕೊಂಡು 'ಹೊಸಗನ್ನಡ ವ್ಯಾಕರಣ' ವನ್ನು ರಚಿಸಿದ್ದಾರೆ. ವ್ಯಾಕರಣದ ಪ್ರಯೋಜನ, ಕ್ರಿಯಾಪದ ರಚನೆ, ವರ್ಣಮಾಲೆ, ಶಬ್ದಕೋಶ ರಚನೆ, ಸಂಧಿ ಮತ್ತು ಸಂಧಿಕಾರ್ಯ ಮತ್ತು ವಾಕ್ಯರಚನೆ ವಿವರಿಸಿದ್ದಾರೆ.

ಶಾಸ್ತ್ರೀಗಳ ಮತ್ತೊಂದು ಮುಕುಟಪ್ರಾಯ ಕೃತಿ 'ದರ್ಪಣ ವಿವರಣ'. ಶಬ್ದಮಣಿದರ್ಪಣದ ಎಲ್ಲ ಸೂತ್ರ ಮತ್ತು ವೃತ್ತಿಗಳನ್ನು ಈಗಿನ ಕಾಲದ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ವಿವರಿಸಿದ್ದಾರೆ.

ಶಾಸ್ತ್ರೀಗಳು ಎರಡು ನಿಘಂಟು ರಚನೆಯಲ್ಲಿ, ನಿಘಂಟು ರಚನೆಯ ಕುರಿತು ಪ್ರಬಂಧಗಳನ್ನು ನೀಡುವಲ್ಲಿ ಸಕ್ರಿಯರಾಗಿದ್ದರು. 'ಶ್ರೀವತ್ಸ ನಿಘಂಟು', ಸಾಹಿತ್ಯ, ಕಲೆ, ಧರ್ಮ, ತತ್ವಶಾಸ್ತ್ರ, ರಾಜ್ಯಶಾಸ್ತ್ರ, ವೈದ್ಯಶಾಸ್ತ್ರದ ಪದಗಳಿಗೆ ವಿವರಣೆ ಹೊಂದಿದೆ. ಶಾಸ್ತ್ರಿಗಳ ಮತ್ತೊಂದು ವಿಶಿಷ್ಟ ಪದಕೋಶ, ಗಜಶಾಸ್ತ್ರ ಶಬ್ದಕೋಶ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಆನೆಗಳ ಬಗ್ಗೆ ಉಲ್ಲೇಖನಗಳು ಅಧಿಕ. ಆನೆಗಳ ದೇಹಾಕೃತಿ, ಗುಣ ಸ್ವಭಾವಗಳಿಗೆ ಸಂಬಂಧಿಸಿದ ಪದಗಳ ಅರ್ಥಗಳನ್ನು ತಿಳಿದುಕೊಳ್ಳಲು ಈ ಕೃತಿ ಸಹಕಾರಿಯಾಗಿದೆ.

'ಕನ್ನಡ ನಿಘಂಟು ರಚನೆಯಲ್ಲಿ ಪ್ರಾಣಿವಾಚಕಗಳ ದಾಖಲಾತಿ' ಮತ್ತು 'ಕನ್ನಡ ನಿಘಂಟು ರಚನೆಯಲ್ಲಿ ಶಬ್ದಾರ್ಥ ವಿಚಾರದ ಕೆಲವಂಶಗಳು' ಎಂಬ ಎರಡು ಪ್ರಬಂಧಗಳನ್ನು ಸವಿಸ್ತಾರವಾಗಿ ಶಾಸ್ತ್ರಿಗಳು ನೀಡಿದ್ದಾರೆ.

ಗ್ರಂಥ ಸಂಪಾದನೆಯಲ್ಲಿ ಶಾಸ್ತ್ರೀಗಳ ನಿಷ್ಠೆ, ಆಳವಾದ ಅಧ್ಯಯನ, ಭಾಷೆಯ ಮೇಲಿನ ಹಿಡಿತ, ವಿಮರ್ಶೆಯ ಪ್ರೌಢಿಮೆ ಸಹಕಾರಿಯಾಗಿದೆ. ತಮ್ಮ ಅಧ್ಯಯನ ಮತ್ತು ಅನುಭವದಿಂದ 'ಗ್ರಂಥ ಸಂಪಾದನ ಪರಿಭಾಷಾ ಕೋಶ' ರಚಿಸಿದ್ದಾರೆ.


ಶಾಸ್ತ್ರೀಗಳ ಕನ್ನಡ ಸುಭಾಷಿತಗಳ ಸಂಪುಟ 'ಕನ್ನಡ ಚೆನ್ನುಡಿ'. 'ಶ್ರೀ ಸಹಜಾನಂದ ಭಾರತೀ ಸ್ವಾಮಿಗಳು' ಮತ್ತು 'ಸರ್ ಎಂ. ವಿಶ್ವೇಶ್ವರಯ್ಯನವರ ಪೂರ್ವಜರು' ಸಂಗ್ರಹಯೋಗ್ಯ.

ವೆಂಕಟಾಚಲ ಶಾಸ್ತ್ರೀಗಳ ಅಧ್ಯಯನ ಮತ್ತು ಸಾಧನೆ ಪರಿಗಣಿಸಿ ಅನೇಕ ಸನ್ಮಾನಗಳು, ಪ್ರಶಸ್ತಿಗಳು ಅರಸಿ ಬಂದಿವೆ. ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಪರಿಷತ್ತಿನ ಭಾಷಾ ಸಮ್ಮಾನ್ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ದೇವರಾಜ ಬಹದ್ದೂರ್ ಪ್ರಶಸ್ತಿ, ಚಾವುಂಡರಾಯ ಪ್ರಶಸ್ತಿ, ಶಂಬಾ ಜೋಶಿ ಪ್ರಶಸ್ತಿ, ಸೇಡಿಯಾಪು, ಚಿದಾನಂದ ಪ್ರಶಸ್ತಿಗಳು, ಕಳಶಪ್ರಾಯವಾದ ಪಂಪ ಪ್ರಶಸ್ತಿ ನೀಡಲಾಗಿದೆ. ಶಾಸ್ತ್ರೀಗಳಿಗೆ ಪಾಂಡಿತ್ಯರತ್ನ, ನಿಘಂಟುತಜ್ಞ, ವಿದ್ವಾಂಸರತ್ನ ಮತ್ತು ಶಬ್ದಶಾಸ್ತ್ರಜ್ಞ ಎಂಬ ಬಿರುದುಗಳನ್ನು ಸಾಹಿತ್ಯ ದಿಗ್ಗಜರು ನೀಡಿದ್ದಾರೆ.

ವೆಂಕಟಾಚಲ ಶಾಸ್ತ್ರೀಗಳು ನೂರಾರು ಉಪನ್ಯಾಸ ನೀಡಿದ್ದಾರೆ. 40 ವರುಷ ಕನ್ನಡ ಸಾಹಿತ್ಯ ಬೋಧನೆ ಮಾಡಿದ್ದಾರೆ. ಸುಮಾರು 100 ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ಎಸ್.ಎಸ್. ಅಂಗಡಿಯವರು ತಿಳಿಸುವಂತೆ ಶಾಸ್ತ್ರೀಗಳು ನಮ್ಮ ಕಾಲದ ಶ್ರೇಷ್ಠ ವಿದ್ವಾಂಸರು, ಸುಸಂಸ್ಕೃತರು, ಚಿಂತನ ಶೀಲರು. ಅವರ ಕೃತಿಗಳು ಮತ್ತು ಸಾಧನೆಗಳು ನಾಡು ನುಡಿಗಳನ್ನು ಬೆಳಗಿದೆ.

5



ತ.ನಾ. ಶಿವಕುಮಾರ್

ತ.ನಾ. ಶಿವಕುಮಾರ್

ಮಂಡ್ಯದ ಪ್ರಖ್ಯಾತ ಸಾಹಿತಿಗಳಾದ ಶ್ರೀ ಟಿ.ಎನ್. ಶಿವಕುಮಾರ್‌ರವರ ಪರಿಚಯವನ್ನು ಅವರ 'ನಮ್ಮ ದತ್ತ' ಕವನದ ಮೂಲಕ ಪ್ರಾರಂಭಿಸೋಣ.

ಗಗನದಾ ಗಂಗೆಯನು
ಭುವಿಗಿಳಿಸಿದಾ ದತ್ತ
ನಾಕುತಂತಿಯ ಮೀಟಿ
ನೋಡಿ ಜೀವನದತ್ತ.

ಕೋಲು ಸಖಿ ಚಂದ್ರಮುಖಿ
ಎಂದ ವರಕವಿ ದತ್ತ
ಕುರುಡು ಕಾಂಚಾಣವನು
ಕುಣಿಸಿ ಕುಣಿದಾ ದತ್ತ.

ಬಾ ಬಡವಿ ನೀ ಬಡವ
ಎಂದು ಉಲಿದಾ ದತ್ತ
ಒಲವೆಮ್ಮ ಬದುಕೆಂದು
ಹಾಡಿ ಹರಸಿದ ದತ್ತ.

ಬಾ ಹತ್ತರಕೆ ಎಂದು
ಕೂಗಿ ಕರೆದಾ ದತ್ತ

ಭೂಮಿ ತಾಯಿಯ ಮಗನ
ಕತೆಯ ಹೇಳಿದ ದತ್ತ

ಅರಳು ಮರಳೆಲ್ಲವನು
ತೂಗಿ ತೊನೆದಾ ದತ್ತ
ನಾದಲೀಲೆಯ ಗಾನ
ಕಿವಿಯ ತುಂಬಿದ ದತ್ತ.

ಸಾಯೊ ಆಟವಿದೆಂದು
ಜಗಕೆ ತೋರಿದ ದತ್ತ
ಯುಗಯುಗಾದಿಯ ಕರೆದು
ನಿತ್ಯ ಹಾಡಿದ ದತ್ತ.

ನಮ್ಮ ದತ್ತ
ಸಾಧನಕೇರಿಯ
ಸಾಧಕನಿವನು
ಅಂಬಿಕಾತನಯ ದತ್ತ.

ತಡಗವಾಡಿ ನಾರಾಯಣ್ ಶಿವಕುಮಾರ್ 'ತನಾಶಿ' ಎಂದೇ ಪ್ರಸಿದ್ಧರು. ತನಾಶಿ ಯವರಿಗೆ ಹಳಗನ್ನಡ ಕಾವ್ಯಗಳ ಅಧ್ಯಯನ ಮತ್ತು ಅಧ್ಯಾಪನ ಬಲು ಪ್ರೀತಿ. ತನಾಶಿಯವರಿಗೆ ಅತ್ಯಂತ ಪ್ರಭಾವ ಬೀರಿದ ಸಾಹಿತಿಗಳು ವಾಲ್ಮೀಕಿ, ರನ್ನ, ಕುಮಾರವ್ಯಾಸ, ಕಾರಂತರು ಮತ್ತು ಕುವೆಂಪು. ತನಾಶಿ ಬಾಲ್ಯದಲ್ಲಿಯೇ ಕುಮಾರವ್ಯಾಸ ಭಾರತದ ವಾಚನ ವ್ಯಾಖ್ಯಾನದಲ್ಲಿ ತೊಡಗಿಕೊಂಡಿದ್ದರು. ಎಂಟನೇ ತರಗತಿ ಯಲ್ಲಿಯೇ ಹಳೆಗನ್ನಡ ಪಠ್ಯ ಭೋಧನೆ ಮಾಡುತ್ತಿದ್ದರು. ಇವುಗಳಿಗೆಲ್ಲಾ ಅವರ ತಂದೆಯೇ ಪ್ರೇರಣೆ. ತನಾಶಿಯವರ ಬಗ್ಗೆ ಪ್ರಸಿದ್ಧ ವಿಜ್ಞಾನಿಗಳಾದ ಶ್ರೀ ನಟರಾಜರ ಒಂದು ಕವನವನ್ನು ಅವಲೋಕಿಸೋಣ.

ಕನ್ನಡ ಸಂಧಿ ಸಮಾಸ ವ್ಯಾಕರಣ ಜ್ಞಾನಂ
ಸರ್ವ ಸಾಹಿತ್ಯಗಳ ವಿಶೇಷ ಜ್ಞಾನಂ
ಹಳಗನ್ನಡ, ನಡುಗನ್ನಡ, ನವ್ಯಕನ್ನಡ ಜ್ಞಾನಂ
ರನ್ನ ಪೊನ್ನ ಜನ್ನರ ಸಾಹಿತ್ಯ ಜ್ಞಾನಂ
ರಾಮಾಯಣ ದರ್ಶನಂ ಜ್ಞಾನಂ
ಸೋಮೇಶ್ವರ ಶತಕ ವ್ಯಾಖ್ಯಾನ ಜ್ಞಾನಂ
ಮಂಕುತಿಮ್ಮ, ಮರುಳ ಮುನಿಯ ಪರಿಣಿತ ಜ್ಞಾನಂ

ಶಂಕರಾದ್ವೈತ ವೈರಾಗ್ಯ ವಿದ್ವತ್ ಜ್ಞಾನಂ
ಕಾವ್ಯ ಕವನ ಛಂದಸ್ಸಿನ ಕುಶಲತೆಯ ಜ್ಞಾನಂ

ಅವರೇ ನಮ್ಮೆಲ್ಲರ ಸಾಹಿತ್ಯ ಗುರುಗಳ ಜ್ಞಾನಂ
ಪರಮಾನಂದದ ಕಾವ್ಯನಾಮ 'ತನಾಶಿ'
ಅರ್ಥಾತ್ 'ಶಿವಕುಮಾರಂ'

ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಶಿವಕುಮಾರ್‌ರವರು ಕನ್ನಡ ಸಾಹಿತ್ಯ ಪ್ರಕಾರದ ಎಲ್ಲ ಮಜಲುಗಳಲ್ಲೂ ಬರೆದಿದ್ದಾರೆ.

ತನಾಶಿಯವರು ಮೂಲತಃ ಮಂಡ್ಯ ಜಿಲ್ಲೆಯ ಮಂಡ್ಯ ಕೊಪ್ಪಲಿನವರು. ಇವರ ತಂದೆ ಟಿ.ಎಲ್. ನಾರಾಯಣ್‌ರವರು ಶಾಲಾ ಶಿಕ್ಷಕರು. ತಾಯಿ ಪದ್ಮಾವತಿ. ಏಳು ಮಕ್ಕಳಲ್ಲಿ ಹಿರಿಯ ಮಗ ಶಿವಕುಮಾರ. ಆರನೇ ವಯಸ್ಸಿನಲ್ಲಿಯೇ ರಂಗಭೂಮಿಗೆ ಪಾದಾರ್ಪಣೆ. ಈವರೆಗೆ 32 ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ, ನಾಲ್ಕು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರಿಗೆ ತಂದೆಯೇ ಮೊದಲ ಗುರು. ತಾಯಿ ಮತ್ತು ಅಜ್ಜಿಯಿಂದ ಭಜನೆ-ದೇವರನಾಮ, ತಾತನಿಂದ ಜೋತಿಷ್ಯ ಕಲಿಕೆ. ತನಾಶಿಯವರು ಅನೇಕ ದೇವರನಾಮಗಳನ್ನು ರಚಿಸಿದ್ದಾರೆ. ಅವರ 'ರಾಧೆಯೊಲವು' ಕವನದಲ್ಲಿ 'ಎದೆಯೊಲವ ಮಧುಹನಿಯ

ಮುದದಿಂದ ನೀಡಿದಳು ರಾಧೆ' ಎನ್ನುವಾಗ ಕವಿಭಾವ ಗೋಚರವಾಗುತ್ತದೆ.

ಜಗವೆಲ್ಲ ಕಂಡಿಹುದು ಹೇಳುವುದು ಹಾಡುವುದು
ಜಗದೊಡೆಯನಾ ಒಲವು ರಾಧೆಯೆಂದು

ಕೃಷ್ಣನಿಗೆ ರುಕ್ಮಿಣಿಯು ಸತ್ಯಭಾಮೆಯ ಜೊತೆಗೆ
ಪಟ್ಟ ಮಹಿಷಿಯು ತಾನು ಆದಳೆಂದು

ನೂರಾರು ಸಾವಿರದ ಗೋಪಿಯರು ಪ್ರಣಯದಲಿ
ಮಾರ ಪಿತನಿಗೆ ಮನವ ಕೊಟ್ಟರಂದು

ಬಾಲ ಗೊಲ್ಲನು ತಾನು ರಾಸಲೀಲೆಯನಾಡಿ
ಕೋಲಾಟದಲಿ ನಾರಿ ಮನಗೆದ್ದನು

ಆದರೂ ರಾಧೆಗನ್ಯಾಯವಾಯಿತು ಎಂದು
ಕಾದಲರು ಅನುದಿನವೂ ಕೊರಗುತಿಹರು

ಯಾರರಿವರೂ ಹೇಳು ಕೃಷ್ಣ ನೊಲವಿನ ಕತೆಯ
ಮಾರನೊಗವನು ಕಂಡ ರಾಧೆಯಲ್ಲಿ

ಕೊಳಲಿನುಸಿರಲಿ ರಾಧೆ ಪ್ರಾಣ ವಾಯುವ ರೀತಿ
ಬೆರೆತಿದ್ದು ಕೃಷ್ಣನಿಗೆ ಮಾತ್ರ ಗೊತ್ತು

ಎದೆಯೊಲವ ಮಧುಹನಿಯ
ಮದನಪಿತನಿಗೆ ತಾನು
ಮುದದಿಂದ ನೀಡಿದಳು ನೇಮ ಹೊತ್ತು

ಕೃಷ್ಣ ರಾಧೆಯ ಮನವು ಪ್ರೀತಿಗದು ಕುಲದೈವ
ರಾಧೆಯರ್ಪಣೆ ಜಗದ ಸಂತರ್ಪಣೆ

ಬೇಡುವುದು ಯಾರನ್ನೂ ಪ್ರೀತಿಯಾಗದು ನೋಡು
ನೀಡಲಹುದೇ ಪ್ರೇಮ ಎದೆಯೊಲವಿಗೆ

ರಾಧೆಗೇ ಕೃಷ್ಣನೋ ಕೃಷ್ಣನಿಗೆ ರಾಧೆಯೋ
ಆಧಾರ ವಿಶ್ವಕ್ಕೆ ಮಧುರಗಳಿಗೆ.

ತನಾಶಿಯವರು ಎಂಟು ನೂರು ಮುಕ್ತಕಗಳನ್ನು ರಚಿಸಿದ್ದಾರೆ. ಅವರ ಮುಕ್ತಕಗಳಲ್ಲಿ ಉಪಯೋಗಿಸುವ ಸೊಗಸಾದ ಸಾಹಿತ್ಯದಲ್ಲಿ ಅನೇಕ ಪದಗಳ ಪರಿಚಯ ಓದುಗರಿಗಾಗುತ್ತದೆ.

ಅವರ ಒಂದು ಮುಕ್ತಕ:

ಸಾಗರದ ಅಲೆಯಂತೆ ಜ್ಞಾನ ಹರಿವುದು ಜಗದಿ
ಬಾಗಿ ಅನುಮತಿಯನದು ಬೇಡುವುದು ಕಾಣೆ
ಜೋಗಿಗಳು ನಾವೆಲ್ಲಾ ಜೋಳಿಗೆಯ ಹೊತ್ತಿಹೆವು
ಮಾಗುವುದು ಶಿವನಿಚ್ಛೆ ಶಿವಕುಮಾರ

ಸಮಯ ಸ್ಫೂರ್ತಿಯ ಮೇಲೆ ತನಾಶಿ ಯವರು ಅನೇಕ ಮುಕ್ತಕಗಳನ್ನು ರಚಿಸಿದ್ದಾರೆ. ನಾಲ್ಕು ಸಾಲುಗಳಲ್ಲಿ ಭಾವ ವ್ಯಕ್ತವಾಗುವ ರೀತಿ ಸೋಜಿಗವಾಗಿರುತ್ತದೆ. ನಿರ್ಮಲದ ಚಿತ್ತವಿರೆ ಜೀವನವೇ ಖುಷಿ ಎಂದು ಕವಿಯ ಮನ.

ಖುಷಿಗೆ ಕಾರಣ ಬೇಕೆ ನೆಪವಿರದ ಸವಿಯಿರದೆ
ವಿಷಯಗಳ ನೆರಳಲ್ಲಿ ಸಂತಸವು ನಿಲದು
ಉಷೆಯಿರಲಿ ನಿಶೆಬರಲಿ ನಿರ್ಮಲದ ಚಿತ್ತವಿರೆ
ಖುಷಿಯೆ ಜೀವನವೆಲ್ಲ ಶಿವಕುಮಾರ

ಮಂಡ್ಯದ ಕೊಪ್ಪಲಿನ ಸರ್ಕಾರಿ ಶಾಲೆಯಲ್ಲಿ ಪ್ರಾರಂಭವಾದ ತನಾಶಿಯವರ ವಿದ್ಯಾಭ್ಯಾಸ. ಅರೆಕೆರೆಯಲ್ಲಿ ಹೈಸ್ಕೂಲು. ಮಂಡ್ಯದ ಬಾಲಕರ ಸರ್ಕಾರಿ ಕಾಲೇಜಿನಲ್ಲಿ ಪಿ.ಯು.ಸಿ. ಮತ್ತು

ಬಿ.ಎ. ಮೈಸೂರಿನ ಮಾನಸಗಂಗೋತ್ರಿಯಲ್ಲಿ ಎಂ.ಎ. ಪದವಿ. ನಂತರ ಹನ್ನೆರಡು ವರುಷ ಮಳವಳ್ಳಿ, ಮಂಡ್ಯ, ಕೆರಗೋಡು ಮತ್ತು ವಿಶ್ವಮಾನವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಪ್ರಸ್ತುತ ನ್ಯಾಯಾಂಗ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ ಕಳೆದ 20 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ತನಾಶಿಯವರು ಸುಮಾರು 1000 ಉಪನ್ಯಾಸ ನೀಡಿರಬಹುದು. ಈ ಸಮಯದಲ್ಲಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಎಂಟೂ ಜನ ಸಾಹಿತಿಗಳೊಡನೆ ಒಡನಾಟ ಹೊಂದಿರುವುದು ಅವರ ಸುಕೃತ. ತನಾಶಿಯವರ ಬಗ್ಗೆ ಖ್ಯಾತ ಕವಿಯಿತ್ರಿ ಶ್ರೀವಲ್ಲಿಯವರು ರಚಿಸಿರುವ ಕವನ.

ಮರುಳ ಮುನಿಯ
ಮಂಕುತಿಮ್ಮನೆಂಬ
ಕಬ್ಬಿನ ಜಲ್ಲೆಯ ಹಿಂಡಿ, ಕಗ್ಗ
ರಸಧಾರೆಯೆಮಗೆ
ನೀಡುತ್ತಿರುವ ಗುರುವಿಗೆ
ವಂದನೆ, ಅಭಿನಂದನೆ.

ಕನ್ನಡದ ವ್ಯಾಕರಣವ
ಸುಲಿದ ಬಾಳೆಯ
ತೆರದಿ, ಉಣಿಸೆಮ್ಮ
ತಣಿಸುತ್ತಲಿರುವ
ಗುರುವರ್ಯರಿಗೆ
ವಂದನೆ, ಅಭಿನಂದನೆ.

ರಾಮಾಯಣದ
ಸುಧೆಯನೆಲ್ಲೆಡೆ

ಹರಡಿ, ಸುಲಲಿತದಿಂ
ಕವನಗಳ ರಚಿಸುವ
ಗುರುಗಳಿಗಿದ್ದೋ
ವಂದನೆ, ಅಭಿನಂದನೆ.

ಹಿರಿಯರ ಗೌರವಿಸಿ,
ಕಿರಿಯರ ಪ್ರೋತ್ಸಾಹಿಸಿ,
ಎಲ್ಲರೊಡನೆ ಬೆರೆತು
ನಲಿವ ನಮ್ಮೆಲ್ಲರ
ಗುರುಗಳೇ ನಿಮಗೆ
ವಂದನೆ, ಅಭಿನಂದನೆ.

ಅನೇಕರು ತನಾಶಿಯವರನ್ನು ಗುರುಗಳು ಎಂದೇ ಸಂಬೋಧಿಸುತ್ತಾರೆ. ಅವರ ಮೊದಲ ಕಾವ್ಯನಾಮ ಪದ್ಮಿನೀಸುತ. ಅನಂತರ ತನಾಶಿ (ಅವರ ಗುರುಗಳಾದ ವೆಂಕಟಾಚಲ ಶಾಸ್ತ್ರೀಗಳು ಸೂಚಿಸಿದ್ದು). ಇವರು ಬಾಲ್ಯದಲ್ಲಿ ಸೈಕಲ್ ರಿಪೇರಿ, ಬೀದಿಯಲ್ಲಿ ಮಿಠಾಯಿ ಮಾರಿದ್ದು, ಪೇಪರ್ ಹಂಚಿದ್ದು ನೆನಪಿಸಿಕೊಂಡರೆ, ಅವರ ಜೀವನಾನುಭವವು ವೇದ್ಯವಾಗುತ್ತದೆ. 1987ರಲ್ಲಿ ಮೈಸೂರು ಆಕಾಶವಾಣಿಯ ಯುವವಾಣಿ ಕಾರ್ಯಕ್ರಮಗಳಲ್ಲಿ ನಿರಂತರ ಭಾಗವಹಿಸುತ್ತಿದ್ದುದು. ಪ್ರತೀ ಕಾರ್ಯಕ್ರಮಕ್ಕೆ ಅಲ್ಲಿ ದೊರೆಯುತ್ತಿದ್ದ 75 ರೂ.ಗಳ ಭತ್ಯೆ ಅವರ ಸಾಹಿತ್ಯ ಕ್ಷೇತ್ರದ ಆಸಕ್ತಿಗೆ, ಬದುಕಿಗೆ ಬಹಳ ಉಪಯುಕ್ತವಾಗಿತ್ತು. ತನಾಶಿ ಯವರಿಗೆ ಶಾಲೆಯಲ್ಲಿ ಮಾರಯ್ಯ ಮೇಷ್ಟ್ರು ಹೈಸ್ಕೂಲಿನ ಬಿ. ಚೆನ್ನಯ್ಯ ಕಾಲೇಜಿನ ವಿ. ಗುಂಡಪ್ಪ, ಎಂ.ಎಚ್. ಕೃಷ್ಣಯ್ಯ ಡಾ. ಹಾ.ಮಾ. ನಾಯಕ್, ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀಗಳ ಪ್ರೇರಣೆ. ತನಾಶಿಯವರ ಪ್ರಕಟಿತ ಪುಸ್ತಕ. ಸೋಮೇಶ್ವರ

ಶತಕದ ಮೇಲೆ ವ್ಯಾಖ್ಯಾನ ಡಿ.ವಿ.ಜಿ ಬರೆದ ಹಾಗೂ ಮಂಕುತಿಮ್ಮನ ಕಗ್ಗದ ಬಗ್ಗೆ ತಿಳಿವಳಿಕೆಯ ವ್ಯಾಖ್ಯಾನ ಪ್ರಕಟಣೆಗಾಗಿ ಅನೇಕ ಪುಸ್ತಕಗಳು ಬಂದಿವೆ.

ಒಂದು ಸರಳವಾದ, ಲಯಬದ್ಧವಾದ, ಆದರೂ ಒಳಗೆಲ್ಲ ಅಡಗಿರುವ ತಿಳಿವಳಿಕೆಯ ಅದ್ಭುತ ಕಲ್ಪನೆ 'ಬಾರಾಮಾ ಚಂದಿರಾಮ' ಪರಿಚಯ ಮಾಡಿ ಕೊಳ್ಳೋಣ.

ತನ್ನೊಡಲಿನಲ್ಲಿ ತಣ್ಣೀರುಗಳನು
ತುಂಬಿದ್ದ ಚಂದಮಾಮ
ಭುವಿನೋಡಲೆಂದು ರಾತ್ರಿಯಲಿ ಬಂದ
ಹಾಲ್ಬೆಳಕ ಚೆಲ್ಲಿ ಧಾಮ

ಈ ಭೂಮಿಯಲ್ಲಿ ಬೆಟ್ಟಗಳ ಕಂಡು
ನಾಚಿದ್ದನೇನೊ ಹಾಗೆ
ತನ್ನದೆಯ ಬೆಳಕ ರವಿಯಿಂದ ತಂದು
ಹರಡಿದ್ದನೇನೊ ಹಾಗೆ

ಭುವಿಯಂಗಳಕ್ಕೆ ಹಾಲ್ಬೆಳಕ ಸುರಿದು
ತಣ್ಣನೆಯ ಗಾದಿ ಹಾಸೆ
ಕಾದಲರಿಗೆಲ್ಲ ಕಾಯುವಿಕೆಯನ್ನೇ
ನೀಡುತ್ತ ಬಿಸಿಯ ಸೋಕೆ

ಕವಿಯ ಮನದಲ್ಲಿ ಕಾವ್ಯ ಕನ್ನಿಕೆಯು
ಉದಿಸುತ್ತ ನಾಟ್ಯವಾಡೆ
ಪ್ರೀತಿ ಪ್ರೇಮಗಳು ಪದದ ರೂಪದಲಿ
ಸಂಭ್ರಮಿಸಿ ಒಂದುಗೂಡೆ,

ಮಾಸಕೊಮ್ಮೆತಾ ಪೂರ್ಣಚಂದವಾಗಿ
ಬರುತಿಹನು ತಿಂಗಳಿಂದು

ಭಾಸವಾಗಿಹುದು ಶೇಷವಿರದಂತೆ
ಕವಿಮನದಿ ಕಾವ್ಯವಿಂದು.

ರಾತ್ರಿಯ ವೇಳೆ, ತಿಂಗಳಿನ ಬೆಳಕು, ಬೆಳಕು ಚೆಲ್ಲಿದಂತೆಲ್ಲ, ಭುವಿಯ ವಿಶೇಷತೆಗಳನ್ನು ಕಂಡು ನಾಚುವ ಚಂದಮಾಮ ಅವನ ಆಗಮನಕ್ಕೆ ಕಾಯುತ್ತ ಕುಳಿತ ಪ್ರೀತಿಸುವ ಮನಸ್ಸುಗಳಿಗೆಲ್ಲ ಬೆಚ್ಚನೆಯ ಭಾವ. ಇಷ್ಟು ಸಾಕಲ್ಲವೇ, ಕವಿ ಮನದಲ್ಲಿ ಕಾವ್ಯದ ಸ್ಫುರಣೆಯಾಗಲು. ಈ ಕವಿತೆಯ ಮನಮಿಡಿವ ಸಾಲುಗಳನ್ನು ರಚಿಸಿ ತನ್ಮೂಲಕ ಕಾವ್ಯ ರಸಿಕರಿಗೆ 'ಚೆಂದಾಮ ಚೆಂದಿರಾಮ'ನನ್ನು ಕವಿ ತೋರಿಸುತ್ತಾರೆ.

ತನಾಶಿಯವರ ಭಾಸ್ಕರನಿಗೆ ಅಕ್ಷರ ನಮನದ ಬಗ್ಗೆ ಅವರ ಆತ್ಮೀಯ ಮಿತ್ರರು, ಕವಿಗಳು ಆದ ಸಿ.ಎನ್. ಮಹೇಶ್‌ರವರು ತಿಳಿಸುವಂತೆ,

ನೇಸರ, ಸೂರ್ಯ, ರವಿ ಹೀಗೆ ಹಲವಾರು ಹೆಸರುಗಳನ್ನು ಹೊತ್ತು ಬಾನಂಗಳದಿ ಬೆರಗು ಮೂಡಿಸುವ, ನಮ್ಮ ಇರುವಿಕೆಗೆ, ಬದುಕಿಗೆ, ಅತಿ ಮುಖ್ಯವಾಗಿರುವ ಸೂರ್ಯನ ಅಸ್ತಿತ್ವ ನಮ್ಮ ಅವಿಭಾಜ್ಯ ಅಂಗವೂ ಹೌದು. ನೇಸರನಿಂದ ದೊರೆಯುವ ಶಕ್ತಿಯನ್ನು ಬಳಸಿಕೊಂಡೇ ನೆಲದಲ್ಲಿರುವ ಕೋಟಿಗಟ್ಟಲೇ ಜೀವಿಗಳು ತಮ್ಮ ಬದುಕನ್ನು ಸಾಗಿಸುತ್ತಿವೆ. ಕಬ್ಬಿಗರ ಕಾವ್ಯದ ಸಾಲುಗಳಿಗೆ ನೇಸರದ ಚೆಲುವು ಹುರುಪು ತುಂಬುತ್ತಲೇ ಅಚ್ಚರಿಯ ವಿಷಯಗಳನ್ನು ಅರಿವಿನ ನೆಲೆಯಲ್ಲಿ ತನ್ನ ಒಡಲೊಳಗೆ ನೇಸರನು ಅಡಗಿಸಿಕೊಂಡಿದ್ದಾನೆ.

ಇಂತಹ ಭಾಸ್ಕರನನ್ನು ವಿಶಿಷ್ಟವಾಗಿ ನೆನೆಯುವ, ಭಕ್ತಿ ಪೂರ್ವಕವಾಗಿ ಅವನನ್ನು ಅಕ್ಷರಗಳ ಮೂಲಕವೇ ಆರಾಧಿಸುವ ಭಾಸ್ಕರನಿಗೆ ಅಕ್ಷರ ನಮನ. ತನಾಶಿ ಯವರಿಂದ ಕನ್ನಡ

ಸಾಹಿತ್ಯಕ್ಕೊಂದು ವಿಶಿಷ್ಟ ಕೊಡುಗೆ. ಪ್ರತಿಯೊಂದು ಅಕ್ಷರದಲ್ಲೂ ಅಡಗಿದ್ದ ಅಚ್ಚರಿಯನ್ನು, ಹೇಳುವ ಪದಮಾಲೆಯನ್ನು, ಕಟ್ಟಿಕೊಡುವ ಅವರ ಶೈಲಿ ಅಪರೂಪ ಮತ್ತು ಅನುಕರಣೀಯ.

ತನಾಶಿಯವರ ಸಾಹಿತ್ಯ ಪ್ರೇಮ ಅಗಾಧ. ಅವರು ಸಂಗ್ರಹಿಸಿದ್ದ ಪುಸ್ತಕಗಳು, ಅವರ ಅನೇಕ ವರುಷದ ಸಾಹಿತ್ಯ ಕೃತಿಗಳು, ಟಿಪ್ಪಣಿಗಳು, ಬರಹಗಳು, ಜೊತೆಗೆ ಮನೆಯಲ್ಲಿದ್ದ ಅವಶ್ಯಕ ವಸ್ತುಗಳು, ಆಕಸ್ಮಿಕವಾಗಿ ಬೆಂಕಿಯ ಪಾಲಾಯಿತು. ಜೀವನ, ಸಾಹಿತ್ಯ ಕೃಷಿ ಹೊಸದಾಗಿ ಪ್ರಾರಂಭಿಸುವಂತಹ ಅನಿವಾರ್ಯತೆ ನಿರ್ಮಾಣವಾಯಿತು. ದೈವಕೃಪೆ, ಮತ್ತೆ ಹೊಸ ಜೀವನದತ್ತ ದಾಪುಗಾಲು ಹಾಕಲು ಪೂರ್ಣ ಸಹಕಾರ ನೀಡಿದವರು ಬಾಳ ಸಂಗಾತಿ ಶ್ರೀಮತಿ ಚಂದ್ರಿಕಾ. ತನಾಶಿಯವರ ಪ್ರಕಾರ ಎಲ್ಲದಕು ಕಾರಣಳು ಬಾಳಸಂಗಾತಿ.

ತನಾಶಿಯವರ ರೈತಾಪಿ ಜನರ ಬಗ್ಗೆ ಒಂದು ಮುಕ್ತಕ:

ಕೈ ತೋಟವನು ಮಾಡೆ ಮೈಮುರಿದು ದುಡಿಯುತಿರು
ಹೂತೋಟ ಮಾಡುವವ ಮಕ್ಕಳಂದದಿರು
ಭೂತಾಯಿ ನೀನೆಂದು ಪ್ರೀತಿಸುತಲಿರಲಾಗ
ರೈತಾಪಿ ನೀನಾಗು ಶಿವಕುಮಾರ.

ತನಾಶಿಯವರು ರಾಮಾಯಣ, ಮಹಾಭಾರತ, ವೇದಗಳು, ಶರಣ ಸಾಹಿತ್ಯ, ದಾಸ ಸಾಹಿತ್ಯಗಳ ಸಾರ ತೆಗೆದುಕೊಂಡು ಅನೇಕ ಕವನಗಳನ್ನೂ, ಮುಕ್ತಕಗಳನ್ನೂ, ರಚಿಸಿದ್ದಾರೆ.ಅವರ ಅನೇಕ ದೇಶಭಕ್ತಿ ಗೀತೆಗಳಿಗೆ ಪ್ರೇರಕ, ವಾಯುಸೇನೆಯಲ್ಲಿ ಸ್ಕ್ವಾಡ್ರನ್ ಲೀಡರ್ ಆಗಿರುವ ಕುವರ ವಿಜಯ್. ಮಗಳು ವಿನುತ ತಂತ್ರಜ್ಞಾನದಲ್ಲಿ ಇಂಜನಿಯರ್.

ತನಾಶಿಯವರು ಜಿಲ್ಲಾ ಹಾಗೂ ರಾಜ್ಯ ಮಟ್ಟದ ವೇದಿಕೆಗಳಲ್ಲಿ ಕವನ ವಾಚನ, ಉಪನ್ಯಾಸಗಳನ್ನು ನಡೆಸಿ

ಕೊಟ್ಟಿದ್ದಾರೆ. ಚರ್ಚಾ ಸ್ಪರ್ಧೆಗಳಲ್ಲಿ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ತನಾಶಿಯವರು ಹೊಸ ಪ್ರಯೋಗಗಳನ್ನು ಮಾಡುವುದರಲ್ಲಿ ನಿಪುಣರು, ಅನೇಕ ವಾಟ್ಸಪ್ ಗುಂಪುಗಳಲ್ಲಿ ಗುರುಗಳ ಸ್ಥಾನ ಪಡೆದಿದ್ದಾರೆ. ಪ್ರತಿಯೊಬ್ಬರಲ್ಲೂ ಕನ್ನಡ ಸಾಹಿತ್ಯದ ಆಸಕ್ತಿ ಮೂಡಿಸಬೇಕೆಂದು, ಬಳಗಗಳಲ್ಲಿ ಭಾಮಿನಿ ಷಟ್ಪದಿ ಬಗ್ಗೆ ವಿವರ ನೀಡಿ, ಭಾಮಿನಿಯಲ್ಲಿ ತಾವು ಕವನ ರಚಿಸಿ ಇತರರೂ ಕವನ ರಚಿಸಲು ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ.

ತನಾಶಿಯವರ ಒಂದು 'ಭಾಮಿನಿ':

ತಿದ್ದಿ ತೀಡುವ ಹುಬ್ಬನೆಲ್ಲವ
ಮುದ್ದು ಮಾಡುವ ಗೌರಿ ನಿಂದಳು
ಸಿದ್ಧಿದಾತಗೆ ಬೆನ್ನು ತಡವುತ ನೀವಿ ಸೊಂಡಿಲನು ।
ಬುದ್ಧಿವಂತನೆ ಹೋಗಿ ಬಾರೆಲೊ
ನಿದ್ದೆಗೈಯದೆ ಹಾದಿಯುದ್ದಕು
ಸದ್ದು ಸಪ್ಪಳವಿಲ್ಲದಂತೆಯೆ ಬೇಗ ಬಂದುಬಿಡು ॥

ತನಾಶಿಯವರ ಕವನಗಳು ಕೆಲವು ಜಿ.ಪಿ. ರಾಜರತ್ನಂ ಕವನಗಳ ಶೈಲಿಯಲ್ಲಿದೆ. ಅವುಗಳಲ್ಲಿ ನನಗೆ ಅತಿ ಪ್ರಿಯವಾದ ಒಂದು ಕವನ 'ಮಂಜ್ಬಿದ್ದಾಗ.'

ಹಾದಿ ಬೀದಿ ಸಂದ್ಯೊಳಗೆಲ್ಲ ಹರಡ್ಕಂಡೈತೆ ಮಂಜು
ಮರಗಳ್ಮೇಲೂ ಎಲೆಗಳ್ಮೇಲೂ ಜೂಗಾಡತ್ತೆ ಮಂಜು
ಮನಿಯಿಂದೀಚೆ ಬಂದ್ರೆ ನೋಡು ಬೀಳೋ ಮಂಜಿನಾಟ
ಒಂದೇ ನಿಮ್ಸಕ್ ಕೂತ್ಕೊಳ್ತೈತೆ ತಲೆಮ್ಯಾಲೆ ಬೆಳ್ಳಿರೀಟ
ಮಂಜಿಗ್ಬೆದರಿ ರಗ್ಗೊದ್ಕೊಂಡ್ರೆ ಕಾಣಾಕಿಲ್ಲ ನೋಟ
ಜಡಾನೆಲ್ಲಾ ಜಾಡ್ಸೊದ್ರೆ ಸಗ್ಗದೊಲ್ಮೆ ಕೂಟ

ಬಾನನ್ನೊತೆಗೆ ಅಂಜ್ದೇ ನೀನು
ಹಿಮ ಬೀಳ್ತಾ ಇರ್ಲಿ
ಮಂಜಿನ್ರಾಶೀಲುಳ್ಳಾಡೋಣ
ಮಯ್ಬಳಿ ಬುಟ್‌ಕಂಡಿಲ್ಲಿ

ಚಳ್ಯಾದ್ರೇನೂ ಮಳ್ಯಾದ್ರೇನು
ನೀನಿಲ್ವಾ ನಂಜೊತ್ಗೆ
ಅಪ್ಕಂಡಂಗೇ ನಡ್ಯೋನಿಂಗೆ
ಬದ್ಕಿರೊವರ್ಗೋ ಇಂಗೆ

ಕಂಡವ್ರೆಲ್ಲ ಕುಣ್ಯಾಕಿಲ್ಲ ಹಾಲಿನ್ಮಂಜಿನ್ಮೇಲೆ
ಎಲ್ಲಿದ್ರೇನೂ ಸಂದಾಗಿದ್ರೆ ಅದ್ವೇ ಶಿವ್ನಲೀಲೆ.

ತನಾಶಿಯವರ ಪ್ರಕಟಿತ ಪುಸ್ತಕ 'ಸೋಮೇಶ್ವರ ಶತಕ'ದ ಅರ್ಥ ಮತ್ತು ವ್ಯಾಖ್ಯಾನಕ್ಕೆ ಮುನ್ನುಡಿಯನ್ನು ಶ್ರೀಯುತ ಕೊಕ್ಕಡ ವೆಂಕಟರಮಣ ಭಟ್ಟರು ನೀಡಿದ್ದಾರೆ. ಪುಟ್ಟ ಪುಟ್ಟವಾದ ನೇರ ಮಾತಿನ ಸ್ಪಷ್ಟ ವಿವರಣೆ, ಅಗತ್ಯವಿದ್ದಲ್ಲಿ ಪದವಿಭಾಗ, ಪದ ಸಂಪತ್ತು ಹೆಚ್ಚಿಸುವಲ್ಲಿ ಕಠಿಣ ಪದಗಳ ಅರ್ಥ, ಮುಕ್ತಕದ ಸರಳಾರ್ಥ, ಮೇಲ್ನೋಟದ ಅರ್ಥ, ತಾತ್ಪರ್ಯ, ಸಂದೇಶ, ಅಗತ್ಯವಿದ್ದಲ್ಲಿ ವಿಶೇಷ ಟಿಪ್ಪಣಿಗಳೊಡನೆ ವ್ಯಾಖ್ಯಾನ ಮಂಜರಿಯು ಸರಸ್ವತಿಯ ಕಂಠಾಭರಣವಾಗುವುದರಲ್ಲಿ ಸಂಶಯವಿಲ್ಲ. ಗಾದೆಮಾತು, ವಚನಗಳ ಝಣತ್ಕಾರ, ಪಡೆನುಡಿಗಳ ಕಿಂಕಿಣಿದನಿ, ದೃಷ್ಟಾಂತಗಳ ಇಣುಕುನೋಟ, ಪುರಾಣ, ಇತಿಹಾಸ, ಸಾಮಾಜಿಕ ಘಟನೆಗಳ ಪೂರಕ ಸಾಹಿತಿಗಳಿಂದ ಮುಕ್ತಕಗಳ ಸೊಗಸಿಗೆ ಮಲ್ಲಿಗೆಯ ಅರಳಿನಂತಿರುವ ಲಲಿತ ಪದಗಳು ವಾಚಕನಿಗೆ ನವಿರುಗಾಪಿನ ಹಿತವನ್ನುಂಟು ಮಾಡುತ್ತವೆ. ಈ ಕೃತಿರತ್ನ ಸರಸ್ವತಿಯ ಮುಡಿಯನ್ನೇರುವಲ್ಲಿ

ಡಿವಿಜಿ ಬಳಗದ ಶ್ರೀ ಕನಕರಾಜು, ಹೈದರಾಬಾದಿನ ಶ್ರೀ ರಾಘವೇಂದ್ರ ರಾವ್, ಗಮಕ ವಿದ್ವಾನ್ ಬ.ನ. ಸುಬ್ರಹ್ಮಣ್ಯ, ಕವಿ ಸುನೀಲ್ ಹಳೆಯೂರು ಮುಂತಾದವರ ಪ್ರೋತ್ಸಾಹವಿದೆ.

ಡಾ. ಗುರುರಾಜ ಕರಜಗಿಯವರು 'ಮಂಕುತಿಮ್ಮನ ಕಗ್ಗ – ಅರ್ಥ ಮತ್ತು ವ್ಯಾಖ್ಯಾನ' ಕೃತಿಯ ಮುನ್ನುಡಿಯಲ್ಲಿ ತನಾಶಿಯವರ ಆಳವಾದ ಚಿಂತನೆಯು ಅನುಭವದ ಮತ್ತು ವಿಶ್ಲೇಷಣಾತ್ಮಕ ಮನಸ್ಸಿನ ಪ್ರತಿಬಿಂಬವಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಕಗ್ಗದ ಎಲ್ಲ ಚೌಪದಿಗಳ ವಾಚ್ಯಾರ್ಥಗಳನ್ನು ನೀಡುವುದರೊಂದಿಗೆ ಅವುಗಳ ಭಾವಗಳನ್ನು ಸೆರೆಹಿಡಿದಿದ್ದಾರೆ ಮತ್ತು ತನಾಶಿಯವರ ದೃಷ್ಟಿ ಸಾಂಪ್ರದಾಯಿಕ ಹಾಗೂ ಆಧುನಿಕ ಚಿಂತನೆಗಳ ಸಮನ್ವಯವಾಗಿದೆ ಎಂದು ತಿಳಿಸಿದ್ದಾರೆ.

ತ.ನಾ.ಶಿ.ರವರ ಪ್ರಕಟಿತ ಕೃತಿಗಳು:

1. ಸೋಮೇಶ್ವರ ಶತಕ ಅರ್ಥ ಮತ್ತು ವ್ಯಾಖ್ಯಾನ
2. ಭಾಸ್ಕರನಿಗೆ ಅಕ್ಷರ ನಮನ
3. ಮಂಕುತಿಮ್ಮನ ಕಗ್ಗ ಅರ್ಥ ಮತ್ತು ವ್ಯಾಖ್ಯಾನ
4. ಹರಿಭಕ್ತಿಸಾರ ಅರ್ಥ ಮತ್ತು ವ್ಯಾಖ್ಯಾನ

ಮುದ್ರಣ ಹಂತದಲ್ಲಿ

1. ಚೂಡಾರತ್ನ ಶತಕ ಅರ್ಥ ಮತ್ತು ವ್ಯಾಖ್ಯಾನ
2. ಮರುಳ ಮುನಿಯನ ಕಗ್ಗ ಅರ್ಥ ಮತ್ತು ವ್ಯಾಖ್ಯಾನ

ಪ್ರತಿನಿತ್ಯ ಹೊಸ ವಿಚಾರಗಳ ತುಡಿವ, ತನಾಶಿ ಕನ್ನಡದಲ್ಲಿ ರಾಮಾಯಣ ಪೂರ್ವಕಾಂಡವನ್ನು 565 ಕಂತುಗಳಲ್ಲಿ ಮತ್ತು ಉತ್ತರಕಾಂಡವನ್ನು 270 ಕಂತುಗಳಲ್ಲಿ ನೀಡಿದ್ದಾರೆ.

'ಡಿವಿಜಿ ಬಳಗ'ದ ಶ್ರೀ ಕನಕರಾಜುರವರ ಅಭಿಪ್ರಾಯದಂತೆ ಮಂಕುತಿಮ್ಮನ 945 ಕಗ್ಗಗಳಿಗೆ ಆರ್ಥಧಾರೆ ನೀಡಿದ್ದಾರೆ. ಕನಕದಾಸರ ಹರಿಭಕ್ತಿಸಾರದ 108 ಷಟ್ಪದಿಗಳಿಗೆ ವ್ಯಾಖ್ಯಾನ ನೀಡಿದ್ದಾರೆ. ಸುಮಾರು 800 ಮುಕ್ತಕಗಳನ್ನೂ, 500 ಕವನಗಳನ್ನೂ ರಚಿಸಿರುವ ಶ್ರೀ ಶಿವಕುಮಾರ್‌ರವರು ಅಯಸ್ಕಾಂತದಂತೆ ಸಾಹಿತ್ಯಾಸಕ್ತರನ್ನು ಆಕರ್ಷಿಸುತ್ತಾರೆ.



ದೇಶಗಳನ್ನು ಸುತ್ತುತ್ತಲೇ ಕನ್ನಡ ಮತ್ತು ಸಂಸ್ಕೃತಿಯನ್ನು ತನ್ನ ಉಸಿರಾಗಿಸಿಕೊಂಡಿರುವ ಬಹುಮುಖ ಪ್ರತಿಭೆಯ ಜಗನ್ನಾಥರು ನಿವೃತ್ತ ಬ್ಯಾಂಕ್ ಅಧಿಕಾರಿ ಹಾಗೂ ಇನ್ಫೋಸಿಸ್ ಕಂಪನಿಯ ಬ್ಯಾಂಕಿಂಗ್ ತಂತ್ರಾಶಗಳ ತರಬೇತಿ ಮುಖ್ಯಸ್ಥರು.

ಸಾಹಿತ್ಯಾಭ್ಯಾಸ, ಭಾಷಣ, ವಿಮರ್ಶೆ ಹಾಗೂ ವ್ಯಾವಹಾರಿಕ ಕನ್ನಡಕ್ಕೆ ವಿಶೇಷ ಕೊಡುಗೆ ನೀಡುತ್ತಿರುವ ಶ್ರೀಯುತರು ನಮ್ಮ ಕನ್ನಡ ನಾಡಿನ ಆಸ್ತಿ ಎಂದರೆ ಅತಿಶಯೋಕ್ತಿ ಆಗಲಾರದು.

ಪ್ರಸ್ತುತ ಅವರ 'ಧ್ರುವತಾರೆಗಳು' ಶ್ರೇಷ್ಠ ವಿದ್ವಾಂಸರ ಕುರಿತಾದ ಅಪರೂಪದ ಕೃತಿ.

ಜಗನ್ನಾಥ್ ಅವರ ಕನ್ನಡ ಕೈಂಕರ್ಯ ನಿರಂತರವಾಗಿರಲಿ ಎಂಬುದು ನಮ್ಮ ಆಶಯ...

ಸುನೀಲ್ ಹಳೆಯೂರು

ಕದಂಬ ಪ್ರಕಾಶನ
ನಂ. 834, 62ನೇ ಅಡ್ಡರಸ್ತೆ, ಕುಮಾರಸ್ವಾಮಿ ಲೇಔಟ್
1ನೇ ಹಂತ, ಬೆಂಗಳೂರು - 560 078
ಮೊ: +91 77955 06693
ಇ-ಮೇಲ್: kadambaprakashana@gmail.com